

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 08 Issue : 23 Saturday 27-09-2025 E-mail : maruti.b.hosamani76@gmail.com Page: 4 Price : Rs. 1/-


# ಪಿ.ಡಬ್ಲ್ಯೂ.ಡಿ ಕಚೇರಿಯಲ್ಲೇ ವಿಶ್ವಕರ್ಮ ಪೂಜೆ ಮತ್ತು ಸರ್.ಎಂ. ವಿಶ್ವೇಶ್ವರಯ್ಯನವರ ಜಯಂತಿ ಮರೀಚಿಕೆ, ಸರ್ಕಾರದ ಆದೇಶ ಉಲ್ಲಂಘಿಸಿ ಘಮಂಡಿ ಮೆರೆದ ಅಧಿಕಾರಿ ವಿರುದ್ಧ – ಜಿಲ್ಲಾಡಳಿತಕ್ಕೆ ಸಾರ್ವಜನಿಕರ ಖಡಕ್ ಎಚ್ಚರಿಕೆ










**ಹುನಗುಂದ : ಬಾಗಲಕೋಟೆ/ಬೆಂಗಳೂರು:** ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಲೋಕೋಪಯೋಗಿ ಇಲಾಖೆ (ಕ.ಫ.ಆ) ಕಚೇರಿಯಲ್ಲಿ ಇಲಾಖಾ ಮುಖ್ಯಸ್ಥರಾದ ಸರ್ ಎಂ. ವಿಶ್ವೇಶ್ವರಯ್ಯನವರ ಜಯಂತಿ ಹಾಗೂ ವಿಶ್ವಕರ್ಮ ಪೂಜಾ ಮಹೋತ್ಸವದಂದು ಪೂಜಾ ಕೈಂಕರ್ಯಗಳು ನಡೆಯದಿರುವುದು ತೀವ್ರ ವಿವಾದಕ್ಕೆ ಕಾರಣವಾಗಿದೆ.

ಸರ್ಕಾರದ ಸುತ್ತೋಲೆಯನ್ನು ಸ್ಪಷ್ಟವಾಗಿ ಉಲ್ಲಂಘಿಸಿ, ತಮ್ಮ 'ಘಮಂಡಿ' (ದುರಹಂಕಾರ) ಯನ್ನು ಮೆರೆದಿರುವ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ (೦ಇಇ) ಈರಯ್ಯ. ಮಾಡಬಾಳಮಠ ಅವರ ವಿರುದ್ಧ ತಕ್ಷಣವೇಶಿಸ್ತುಕ್ರಮಕೈಗೊಳ್ಳಬೇಕು ಎಂದು ಸಾರ್ವಜನಿಕರು ಮತ್ತು ವಿಶ್ವಕರ್ಮ ಸಮುದಾಯದವರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ವಿಷಯ ಇಡೀ ಜಿಲ್ಲಾ ಆಡಳಿತವೇ ಬೆಚ್ಚಿ ಬೀಳುವಂತೆ ಮಾಡಿದೆ.

**ಸುತ್ತೋಲೆ ಉಲ್ಲಂಘನೆ ಮತ್ತು ದುರಹಂಕಾರ:** ವಿಶ್ವಕರ್ಮ ಪೂಜಾ ಮಹೋತ್ಸವವನ್ನು ಮತ್ತು ಸರ್ಕಾರಿ ಇಲಾಖೆಗಳಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರ ಜಯಂತಿಯನ್ನು ರಾಜ್ಯ ವ್ಯಾಪಿಯಾಗಿ ಆಚರಿಸಬೇಕೆಂಬ ಸರ್ಕಾರದ ಸುತ್ತೋಲೆ ಇದೆ. ಆದ–ರೆ, ವರದಿಗಾರರು ಹುನಗುಂದದ ತಹಶೀಲ್ದಾರ್ ಕಚೇರಿ, ತಾಲೂಕು ಪಂಚಾಯತ್ ಮತ್ತು ಪಿ.ಡಬ್ಲ್ಯೂ.ಡಿ ಕಚೇರಿಗಳಿಗೆ ಭೇಟಿ ನೀಡಿದಾಗ, ಪಿ.ಡಬ್ಲ್ಯೂ.ಡಿ ಕಚೇರಿಯಲ್ಲಿ ಯಾವುದೇ ಪೂಜೆ, ಪುನಸ್ಕಾರಗಳು ನಡೆದಿಲ್ಲದಿರುವುದು ಸ್ಪಷ್ಟವಾಗಿ ಗೋಚರಿಸಿದೆ.

ಅಧಿಕಾರಿ ಈರಯ್ಯ. ಮಾಡಬಾಳಮಠ ಅವರು ಇಲಾಖೆಯಡ್ರಾಯಿಂಗ್ಆಫೀಸರ್ ಆಗಿ ಇಂತಹ ಜವಾಬ್ದಾರಿಯನ್ನು ನಿರ್ಲಕ್ಷಿಸಿದ್ದಾರೆ. "ಈ ಇಲಾಖೆಯ ಡ್ರಾಯಿಂಗ್ ಆಫೀಸರ್ ಇವರೇ, ಇವರಿಗೆ ಬಿಟ್ಟರೆ ಇನ್ನ ಯಾರಿಗೂ ಬರುವುದಿಲ್ಲ" ಎಂಬಂತಹ 'ಘಮಂಡಿ ಗಿರಾಕಿ' ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿಬಂದಿದ್ದು, ಸರ್ಕಾರದ ಆದೇಶವನ್ನೇ ಸ್ಪಷ್ಟವಾಗಿ ಉಲ್ಲಂಘಿಸುವಷ್ಟು ದುರಹಂಕಾರಿ, ಅವಿವೇಕಿ ಈ ಅಧಿಕಾರಿ ತಾಲೂಕಿಗೆ ವಕ್ಕರಿಸಿಕೊಂಡಿರುವುದು ತಾಲೂಕಿನ ಜನತೆಯ ದುರ್ದೈವ ಎಂದು ಜನತೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**ಮೇಲಾಧಿಕಾರಿಗಳಿಂದ ಸಬೂಬು!** ಈ ಗಂಭೀರ ವಿಚಾರವನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದಾಗ, "ಅವರು ಅಂತವನಲ್ಲ" ಎಂದು ಸಬೂಬು ಹೇಳಿ ಆ ಅಧಿಕಾರಿಯನ್ನು ಸಮರ್ಥಿಸುವ ಪ್ರಯತ್ನ ಮಾಡಿರುವುದು ಪರಿಸ್ಥಿತಿಯ ಗಂಭೀರತೆಯನ್ನು ಹೆಚ್ಚಿಸಿದೆ. ಈ ಮಧ್ಯೆ, ಪಿ.ಡಬ್ಲ್ಯೂ.ಡಿ ಕಚೇರಿಯಲ್ಲಿ ಪೂಜೆ ನಡೆಯದಿದ್ದರೂ, ಹುನಗುಂದದ ವಿಶ್ವಕರ್ಮ ಕಟ್ಟಡ ಕಾರ್ಮಿಕರ ಮತ್ತು ಕಾರ್ಪೆಂಟರ್ ಸಂಘದ ವತಿಯಿಂದ ಅತ್ಯಂತ ಯಶಸ್ವಿಯಾಗಿ ಪೂಜಾ ಮಹೋತ್ಸವ ಆಚರಿಸಲಾಗಿದೆ. ಸರ್ಕಾರಿ ನೌಕರರಾಗಿ ಕನಿಷ್ಠ ಕೆಳಹಂತದ ನೌಕರರಿಗೆ ಹೇಳಿಯಾದರೂ ಪೂಜೆ ಮಾಡಿಸದ ಅಧಿಕಾರಿಯ ನಡೆ ವಿಶ್ವಕರ್ಮ ಸಮುದಾಯದ ಕೆ–ಂಗಣ್ಣಿಗೆ ಗುರಿಯಾಗಿದೆ.

**ಜಿಲ್ಲಾಧಿಕಾರಿಗಳಿಗೆ ತಕ್ಷಣದ ಕ್ರಮಕ್ಕೆ ಆಗ್ರಹ:** ಈ ಗಂಭೀರ ನಿರ್ಲಕ್ಷ್ಯ, ಕರ್ತವ್ಯ ಲೋಪ ಮತ್ತು ಸರ್ಕಾರದ ಸುತ್ತೋಲೆಯ ಉಲ್ಲಂಘನೆಗೆ ಸಂಬಂಧಿಸಿದಂತೆ ಸಾರ್ವಜನಿಕರು ಮತ್ತು ವಿವಿಧ ಸಂಘಟನೆಗಳು ಈ ಕೆಳಗಿನ ಆಗ್ರಹಗಳನ್ನು ಮುಂದಿಟ್ಟಿವೆ.

ಕೂಡಲೇ ಅಮಾನತು ಮತ್ತು ಶಿಸ್ತು ಕ್ರಮ: ಜಿಲ್ಲಾಧಿಕಾರಿಯವರು ಕೂಡಲೇ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಈರಯ್ಯ.ಮಾಡಬಾಳಮಠ ಅವರ ವಿರುದ್ಧ ತಕ್ಷಣವೇ ಅಮಾನತು ಸೇರಿದಂತೆ ಶಿಸ್ತು ಕ್ರಮ ಜರುಗಿಸಬೇಕು. ಇಂತಹ ಅಧಿಕಾರಿಯ ದರ್ಪಕ್ಕೆ ರಾಜ್ಯ ಸರ್ಕಾರ ಕೂಡಲೇ ಉತ್ತರ ನೀಡಬೇಕು.

ಲೋಕಾಯುಕ್ತ ತನಿಖೆ: ಅಧಿಕಾರಿಗಳ ಈ ನಿರ್ಲಕ್ಷ್ಯ ಮತ್ತು ಸಾರ್ವಜನಿಕರ 'ಮಂಗಳಾರತಿಗೆ ಆಹಾರವಾದ' ವರ್ತನೆಯ ಬಗ್ಗೆ ಸಮಗ್ರ ತನಿಖೆ ನಡೆಸಲು ಲೋಕಾಯುಕ್ತ ಅಧಿಕಾರಿಗಳು ಪ್ರಕರಣವನ್ನು ಕೈಗೆತ್ತಿಕೊಳ್ಳಬೇಕು.

ಉಸ್ತುವಾರಿ ಸಚಿವರ ಜವಾಬ್ದಾರಿ: ಇಂತಹ ಘಟನೆಗಳು ಜಿಲ್ಲೆಯಲ್ಲಿ ನಡೆ–ಯುತ್ತಿದ್ದರೂ, ಜಿಲ್ಲಾಧಿಕಾರಿಗಳು ಮತ್ತು ಉಸ್ತುವಾರಿ ಸಚಿವರು ಬೇಜವಾಬ್ದಾರಿ ತೋರುವುದು ಸರಿಯಲ್ಲ. ಇಡೀ ಜಿಲ್ಲಾ ಆಡಳಿತ ವ್ಯವಸ್ಥೆಯ ಮೇಲಿನ ನಂಬಿಕೆ ಕಡಿಮೆಯಾಗುತ್ತಿದ್ದು, ತಕ್ಷಣವೇ ಪಿ.ಡಬ್ಲ್ಯೂ.ಡಿ ಸಚಿವರಾದ ಸತೀಶ್ ಜಾರಕಿಹೊಳಿ ಸಾಹೇಬ್ರು ಈ ಕುರಿತು ಗಮನಹರಿಸಬೇಕು.

ಕಾನೂನು ಕ್ರಮದ ಎಚ್ಚರಿಕೆ: ಸರ್ಕಾರಿ ಸುತ್ತೋಲೆ ಉಲ್ಲಂಘನೆ ಮತ್ತು ಕರ್ತವ್ಯ ನಿರ್ಲಕ್ಷ್ಯಕ್ಕೆ ಸಂಬಂಧಿಸಿದಂತೆ ಅಖಿಲ ಭಾರತ ಸೇವಾ ನಿಯಮಗಳು (All India Services Rules) ಮತ್ತು ಕರ್ನಾಟಕ ನಾಗರಿಕ ಸೇವಾ ನಿಯಮಗಳ (KCS Rules) ಅಡಿಯಲ್ಲಿ ಸೂಕ್ತ ಮತ್ತು ಕಠಿಣ ಕಾನೂನು ಕ್ರಮ ಜರುಗಿಸಬೇಕು.

ದಲಿತರ ಧ್ವನಿ ಮತ್ತು ನೇರ ನಿಷ್ಠುರವಾದಿ ಎಂದು ಖ್ಯಾತಿ ಪಡೆದ ಪಿ.ಡಬ್ಲ್ಯೂ.ಡಿ ಸಚಿವರಾದ ಸತೀಶ್ ಜಾರಕಿಹೊಳಿ ಸಾಹೇಬ್ರು ಈ ವರದಿಯನ್ನು ಗಮನಿಸಿ ಸೂಕ್ತ ಕ್ರಮ ಜರುಗಿಸುವ ಮೂಲಕ ರಾಜ್ಯ ಸರ್ಕಾರದ ಗಮನ ಸೆಳೆಯಬೇಕು ಎಂದು ಸಾರ್ವಜನಿಕರ ಮೂಲಕ ಆಕ್ರೋಶದ ಆಗ್ರಹವಾಗಿದೆ.

ತಾಲೂಕಿನ ಶಾಸಕರು 'ನಮಗ್ಯಾಕ ಉಸಾಬರಿ' ಎಂದು ಕೈತೊಳೆದು ಟವಲ್ನಲ್ಲಿ ಆಟ ಆಡಿಸದೆ, ಸ್ಪಷ್ಟ ನಿಲುವು ತೆಗೆದು ಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

**ಸಂಪಾದಕರು**
**ಮಾರುತಿ.ಬಿ ಹೊಸಮನಿ**
**ಸಿಹಿ ಕಹಿ ಕನ್ನಡ ದಿನ ಪತ್ರಿಕೆ**
**ಹಾಗೂ**
**ಎಸ್.ಕೆ ನ್ಯೂಸ್ ಕನ್ನಡ ಚಾನಲ್**
**ಬಾಗಲಕೋಟೆ/ಹುನಗುಂದ**

# ಮಾನವ ಧರ್ಮದ ಮಠ ಬಂಡಿಗಣಿ ನೀಲಮಾಣಿಕ



**ರಬಕವಿ–ಬನಹಟ್ಟಿ :** ಬಸವಣ್ಣನವರ ದಾಸೋಹದ ಅನುಷ್ಠಾನವನ್ನು ಕಲಿಯುಗದಲ್ಲಿ ಮುನ್ನಡೆಸಿಕೊಂಡು ಕ್ರಾಂತಿಕಾರಿ ಬೆಳವಣಿಗೆ ಕಾಣುತ್ತಿರುವ ಬಂಡಿಗಣಿಮಠದ ದಾನೇಶ್ವರಶ್ರೀಗಳ ಬಸವಗೋಪಾಲ ನೀಲಮಾಣಿಕಮಠವು ಯಾವುದೇ ಧರ್ಮ, ಜಾತಿ, ಪಂಥಗಳಿಗೆ ಸೀಮಿತವಾಗದೆ ಮಾನವ ಧರ್ಮದ ಮಠವಾಗಿ ಬೆಳೆದಿರುವದು ರಾಜ್ಯವಷ್ಟೇ ಅಲ್ಲದೆ ಇಡೀ ದೇಶಕ್ಕೇ ಮಾದರಿಯೆಂದು ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ಹೇಳಿದರು.

ಶುಕ್ರವಾರ ಬಂಡಿಗಣಿಯ ಬಸವಗೋಪಾಲ ನೀಲಮಾಣಿಕಮಠದಲ್ಲಿ ಜರುಗಿದ ದಾನೇಶ್ವರ ಶ್ರೀಗಳ 'ಅಮೃತ ಮಹೋತ್ಸವ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು,ಬುದ್ಧ,ಬಸವ,ಅಂಬೇಡ್ಕರ್‌ಮಾದ–ರಿಯಲ್ಲಿ ಮಹಿಳಾ ಸಮಾನತೆಗೆ ಮಠವು ಪ್ರಾಧಾನ್ಯತೆ ನೀಡಿದೆ. ಎಲ್ಲ ವರ್ಗಗಳ ಭಕ್ತರು ಮಠಕ್ಕಿರುವುದರಿಂದಲೇ ಶಕ್ತಿಯಾಗಿದ್ದು, ಧರ್ಮಾಂಧತೆ ಮೂಡಿಸುತ್ತಿರುವ ರಾಜಕಾರಣಿಗಳಿಗೆ ಬಂಡಿಗಣಿಮಠವು ಅಧಿಪತಿಯಾಗಿದೆಯೆಂದರು.

ದಾನೇಶ್ವರಶ್ರೀಗಳು ಮಾತನಾಡಿ, ಅಧರ್ಮ ತಾಳಿದಾಗ ಅದನ್ನು ಹೊಡೆದೋಡಿಸಲು ಪರಮಾತ್ಮ ಧರ್ಮ ಸ್ಥಾಪನೆಗೆ ಆಗಾಗ್ಗೆ ಅವತರಿಸುವುದು ನಿರಂತರವಾಗಿದೆ. ಕಲಿಯುಗದಲ್ಲಿಯೂ ಕೃಷ್ಣ ಪರಮಾತ್ಮನ ಅವತಾರದಲ್ಲಿ ಧರೆಗಿಳಿದಿರುವದು ಸತ್ಯವೆಂದರು. ಲೇಸನ್ನು ಬಯಸುವವನೇ ಬಂಡಿಗಣಿಬಸವಣ್ಣ,ಆಧ್ಯಾತ್ಮ,ಪ್ರಾಮಾಣಿಕತೆ ಕಾಪಾಡಿಕೊಂಡು ಹೋಗುವುದೆ ಮಾನವ ಧರ್ಮವಾಗಿದೆ. ಇಷ್ಟೊಂದು ಅಪಾರ ಭಕ್ತರ ಸಂಖ್ಯೆಯನ್ನು ನೋಡುವದೆ ನನ್ನ ಪುಣ್ಯವೆಂದರು.

ಹುಲಜಂತಿಭೂಕೈಲಾಸದಮಾಳಿಂಗರಾಯ ಮಹಾರಾಜರು ಮಾತನಾಡಿ, ಹುಲಜಂತಿ ಮಠದಲ್ಲಿ ಪ್ರಥಮ ಅನ್ನದಾಸೋಹ ಮಾಡಿದ ಕೀರ್ತಿ ಬಂಡಿಗಣಿಮಠದ್ದು, ಆಧ್ಯಾತ್ಮದ ರಸ, ಭೂಮಿಯ ಮೇಲೆ ಎಲ್ಲಿ ಹರಿಯುತ್ತಿದೆಯೋ ಅಲ್ಲೆಲ್ಲ ಬಂಡಿಗಣಿಮಠದಿಂದ ಅನ್ನದಾಸೋಹ ನಡೆಯುತ್ತಿದೆಯೆಂದರು.

ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮದ ಅಧ್ಯಕ್ಷ ಕೀರ್ತಿ ಗಣೇಶ ಎನ್. ಜಿ. ಮಾತನಾಡಿ, ಶ್ರೀಗಳು ಬೆಳೆದು ಬಂದ ದಾರಿ ವಿಶೇಷವಾಗಿದ್ದು, ಪ್ರಾಥಮಿಕ, ಪ್ರೌಢಶಾಲಾ ಪಠ್ಯಕ್ರಮದಲ್ಲಿ ಇವರ ಜೀವನ ಚರಿತ್ರೆ ಅಳವಡಿಸುವಂತೆ ಸರ್ಕಾರಕ್ಕೆ ಮನವಿ ಮಾಡಲಾಗುವುದೆಂದರು. ಮಾಜಿ ಶಾಸಕ ಆನಂದ ನ್ಯಾಮಗೌಡ, ಕವಿತಾ ಸಿದ್ದು ಕೊಣ್ಣೂರ, ವಿದ್ಯಾಧರ ಸಿದ್ದು ಸವದಿ, ಲಕ್ಕಪ್ಪ ಪಾಟೀಲ ಮಾತನಾಡಿದರು. ಬಸನಗೌಡ ಪಾಟೀಲ, ಭೀಮಪ್ಪ ತಳವಾರ, ಸಂಗಮೇಶ ಸೋರಗಾಂವಿ, ಹರ್ಷವರ್ಧನ ಪಟವರ್ಧನ, ಭೀಮಶಿ ಮಗದುಮ್, ಸದಾಶಿವ ತಟಕೋಟ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

# ಅಲ್ಪಸಂಖ್ಯಾತರ ಅಭಿವೃದ್ಧಿಗೆ ಸಂಘದ ಪಾತ್ರ ಹಿರಿದು



**ಬನಹಟ್ಟಿ :** ನಗರದ ಅಲ್ಪಸಂಖ್ಯಾತ ಸಮುದಾಯದ ಏಳ್ಗೆಗೆ 27 ವರ್ಷಗಳಿಂದ ಅವಿರತ ಸೇವೆಯ ಮೂಲಕ ಆರ್ಥಿಕ ಸಬಲೀಕರಣ–ಕ್ಕೆ ಬನಹಟ್ಟಿ ಅಲ್ಪಸಂಖ್ಯಾತ ಸೊಸೈಟಿ ಪ್ರಾಧಾನ್ಯತೆ ನೀಡುವಲ್ಲಿ ಯಶಸ್ವಿಯಾಗಿದೆಯೆಂದು ಸಂಘದ ಅಧ್ಯಕ್ಷ ಇರ್ಷಾದ ಮೋಮಿನ್ ಹೇಳಿದರು.

ಬನಹಟ್ಟಿಯ ಸಂಘದ ಕಾರ್ಯಾಲಯದಲ್ಲಿ ಜರುಗಿದ ಸಾಮಾನ್ಯ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪ್ರಸಕ್ತ ವರ್ಷ 8.32 ಕೋಟಿ ರೂ.ಗಳಷ್ಟು ಠೇವುದೊಂದಿಗೆ 7.28 ಕೋಟಿ ರೂ.ಗಳಷ್ಟು ಸಾಲ ವಿತರಿಸಲಾಗಿದೆ. ಒಟ್ಟು 25.71 ಲಕ್ಷ ರೂ.ಗಳಷ್ಟು ಲಾಭದೊಂದಿಗೆ ಶೇರುದಾರರಿಗೆ ಶೇ.15 ರಷ್ಟು ಲಾಭಾಂಶ ವಿತರಿಸಲಾಗುವದೆಂದು ಮೋಮಿನ್ ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಯುನುಸ್ ನಿಪ್ಪಾಣಿ ಮಾತನಾಡಿ, ಪ್ರತಿಯೊಬ್ಬರೂ ಸಹಕಾರಿ ಸಂಘದೊಂದಿಗೆ ಕಾರ್ಯ ಚಟುವಟಿಕೆ ನಿರ್ವಹಿಸುವುದರೊಂದಿಗೆ ಆರ್ಥಿಕ ಸಬಲೀಕರಣ ಹಾಗು ವಾಣಿಜ್ಯ ಮಾಹಿತಿ ಪಡೆಯುವದರೊಂದಿಗೆ ಅಭಿವೃದ್ಧಿ ಹೊಂದಬೇಕೆಂದರು.

ಸಭೆಯ ಉಪಾಧ್ಯಕ್ಷ ಮುಜಫರ್ ಆಲಮೇಲ, ಬುಡಾನಸಾಬ ಜಮಾದಾರ, ಹಾರೂನ್ ಬೇವೂರ, ನಶೀಂ ಮೊಕಾಶಿ, ರಾಜೇಸಾಬ ಸಂತಿ, ಝಾಕೀರ ಬಾರಿಗಡ್ಡಿ, ಸುಲ್ತಾನ ಆಲಮೇಲ, ಗುಲಾಬ ಯಾದವಾಡ, ಅಶ್ರಫ್ ಮಹಾಲಿಂಗಪೂರ, ತೌಫೀಕ ಮುಲ್ಲಾ, ಸಲೀಂ ಬಾರಿಗಡ್ಡಿ, ಅಬೂಬಕರ ಗಾಡಬೋಲೆ, ಸಿರಾಜಸಾಬ ಬನಹಟ್ಟಿ, ಆಯೇಶಾ ರಾಜೇಸಾಬ ಬಾರಿಗಡ್ಡಿ, ರುಬೀನಾ ರಫೀಕ್ ಡಾಂಗೆ, ಪ್ರಕಾಶ ಬೆಲ್ಲಮ, ರಾಮಪ್ಪ ದಳವಾಯಿ, ಕಾರ್ಯದರ್ಶಿ ತಾರಿಪುರ ರಹೆಮಾನ ಬಾಗಲಕೋಟ, ಆಶ್ಪಾಕ ಸೌದಾಗರ, ಅಬುಬಕರ ಮೋಮಿನ, ಶಮಸುದ್ದೀನ ಗುರಾಡಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತ–ರಿದ್ದರು.

# ಅಭಿಯಂತರರು ಸಮಯಕ್ಕೆ ಹೆಚ್ಚಿನ ಮಹತ್ವ ನೀಡಬೇಕು




**ಜಮಖಂಡಿ :** ಅಭಿಯಂತರರು ಸಮಯಕ್ಕೆ ಮತ್ತು ಗುಣಮಟ್ಟಕ್ಕೆ ಹೆಚ್ಚಿನಮಹತ್ವನೀಡಬೇಕು.ನೂತನ ತಂತ್ರಜ್ಞಾನ ಅಳವಡಿಸಿಕೊಳ್ಳುವ ಮೂಲಕ ಉತ್ತಮ ಗುಣಮಟ್ಟದ ಕೆಲಸಗಳನ್ನು ಮಾಡಿದರೆ ಅದಕ್ಕೆ ಹೆಚ್ಚಿನ ಮಹತ್ವ ಬರಲಿದೆ ಎಂದು ತಾಲೂಕು ಸಿವಿಲ್ ಇಂಜೇನಿಯರ ಸಂಘದ ಅಧ್ಯಕ್ಷ ಎ. ಆರ್. ಶಿಂಧೆ ಹೇಳಿದರು.

ನಗರದ ಹೆಸ್ಕಾಂ ನೌಕರರ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಭಾರತ ರತ್ನ ವಿಶ್ವೇಶ್ವರಯ್ಯನವರ ಜನ್ಮದಿನ ಮತ್ತು ಅಭಿಯಂತರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಭಿಯಂತರ ಪದವಿ ಮುಗಿಸಿದ ತಕ್ಷಣ ನಿರ್ಮಾಣದ ಕೆಲಸಗಳನ್ನು ಪ್ರಾರಂಭಿಸದೇ ಪರಿಣಿತಿ ಪಡೆಯಬೇಕು. ಫೀಲ್ಡವರ್ಕ ಮಾಡಿ ಅನುಭವ ಪಡೆದು ತಮ್ಮ ಕಂಪನಿಗಳನ್ನು ಪ್ರಾರಂಭಿಸಬೇಕೆಂದು ನುಡಿದರು.

ಎಲ್ಲರೂ ಒಂದುಗೂಡಿ ಸಮಸ್ಯೆಗಳಿಗೆಪರಿಹಾರಕಂಡುಕೊಳ್ಳಲು ಅಭಿಯಂತರ ಸಂಘವನ್ನು ಪ್ರಾರಂಭಿಸಲಾಗಿದೆ. ಎಲ್ಲ ಸದಸ್ಯರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು. ಕಟ್ಟಡ ನಿರ್ಮಾಣಕ್ಕೆ ಕೊನೆ ಎಂಬುದಿಲ್ಲ. ಇದೊಂದು ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿದೆ.

ಆದ್ದರಿಂದ ಸಿವಿಲ್ ಅಭಿಯಂತರರು ಭಯ ಪಡಬೇಕಾದ ಅವಶ್ಯಕತೆ ಇಲ್ಲ ಎಂದರು.

ಪಿಡಬ್ಲ್ಯುಡಿ ಇಲಾಖೆಯ ಹಿರಿಯ ಅಭಿಯಂತರ ಶಂಕರ ಬಂಡಿವಡ್ಡರ ಮಾತನಾಡಿ, ಕಟ್ಟಡ ನಿರ್ಮಾಣಕ್ಕೆ ಬೇಕಾಗುವ ವಿವಿಧ ವೃತ್ತಿಗಳ ಕಾರ್ಮಿಕರನ್ನು ಒಂದು ವೇದಿಕೆಯಲ್ಲಿ ಸೇರಿಸಿಕೊಂಡು ಒಗ್ಗಟ್ಟಿನಿಂದ ಸಮಸ್ಯೆಗಳನ್ನು ಬಗೆಹರಿಸಿ ಕೊಳ್ಳಬೇಕು. ಕಟ್ಟಡ, ರಸ್ತೆ, ಸೇತುವೆ ಹೀಗೆ ಅನೇಕ ನಿರ್ಮಾಣದ ಕಾಮಗಾರಿಗಳು ನಿರಂತರ ನಡೆಯುವುದರಿಂದ ಸಿವಿಲ್ ಅಭಿಯಂತರರಿಗೆ ಸಾಕಷ್ಟು ಅವಕಾಶಗಳಿವೆ. ಪರಿಣಿತಿ ಪಡೆದರೆ ಉತ್ತಮ ಅಭಿಯಂತರರಾಗಿ ಸೇವೆ ಸಲ್ಲಿಸಲು ಹಲವಾರು ಅವಕಾಶಗಳಿಗೆ ಎಂದರು.

ನಿವೃತ್ತ ಅಭಿಯಂತರ ಪಾಂಡುರಂಗ ಗಾಯಕವಾಡ ಮಾತನಾಡಿ, ರಾಜ್ಯದ 217 ಕಾಲೇಜುಗಳಿಂದ ಪ್ರತಿವರ್ಷ 1.30 ಲಕ್ಷ ವಿದ್ಯಾರ್ಥಿಗಳು ಅಭಿಯಂತರರಾಗಿ ಹೊರಬರುತ್ತಾರೆ. ಎಲ್ಲರಿಗೂ ಸರ್ಕಾರಿ ಉದ್ಯೋಗಗಳು ದೊರೆಯಲು ಸಾಧ್ಯವಿಲ್ಲ. ಹತಾಶರಾಗದೇ ಉತ್ತಮ ಪರಿಣಿತಿ ಪಡೆದು ಸ್ವಯಂ ಉದ್ಯೋಗವನ್ನು ಪ್ರಾರಂಭಿಸಬೇಕೆಂದರು.

ನಗರ ಯೋಜನಾ ಪ್ರಾಧಿಕಾರ ನಿದೇ9ಶಕ ಶಿವಕುಮಾರ ಅಲ್ಲೂರಿ ಮಾತನಾಡಿ, ಸ್ಥಳೀಯವಾಗಿ ಸುಲಭವಾಗಿ ದೊರೆಯುವ ಕಲ್ಲು, ಇಟ್ಟಿಗೆ ಮುಂತಾದ ಮೂಲ ವಸ್ತುಗಳನ್ನು ನಿರ್ಮಾಣ ಕಾಮಗಾರಿಗೆ ಬಳಸಬೇಕು. ಅನೇಕ ಸ್ಮಾರಕಗಳು ಸೇ–ರಿದಂತೆ ಹಲವಾರು ವಿಶ್ವ ಪ್ರಸಿದ್ಧ ಕಟ್ಟಡಗಳು ಸ್ಥಳೀಯ ವಸ್ತುಗಳನ್ನು ಬಳಸಿ ನಿರ್ಮಿಸಲಾಗಿದೆ ಎಂದರು.

ಅಭಿಯಂತರ ವಿಜಯ ಕಟಗಿ ಮಾತನಾಡಿದರು. ವೇದಿಕೆಯಲ್ಲಿ ಅಭಿಯಂತರರಾದಸೋಮನಾಥ ಹಿರೇಮಠ, ಉದಯ ಮುನವಳ್ಳಿ, ಝಾಕಿರಹುಸೇನ ನದಾಫ ಸಹಿತ ಇನ್ನೂ ಹಲವರು ಪಾಲ್ಗೊಂಡಿದ್ದರು.

# ಗುರುವಿನ ನಾಮಸ್ಮರಣೆಯಿಂದ ಎಲ್ಲವೂ ಸಾಧ್ಯ



**ಬನಹಟ್ಟಿ :** ಗುರುವಿನ ಮಹಿಮೆ ಅಪಾರವಾದುದು. ಸದಾ ನಾಮಸ್ಮರಣೆಯಿಂದ ಎಲ್ಲವೂ ಸಾಧ್ಯವೆಂದು ವೇದಮೂರ್ತಿ ಚರಂತಯ್ಯ ಹಿರೇಮಠ ಹೇಳಿದರು.

ಅವರು ಬನಹಟ್ಟಿಯ ಸೋಮವಾರ ಪೇಟೆಯ ಶರಣರ ಬಾವಿ ಹತ್ತಿರವಿರುವ ಹಿರೇಮಠದಲ್ಲಿ ಗಂಗಾಧರ ಸ್ವಾಮಿಗಳ ಹಾಗೂ ಮೃತ್ಯುಂಜಯ ಸ್ವಾಮಿಗಳ ಪುಣ್ಯಾರಾಧನೆ ಪ್ರಯುಕ್ತ ಜರುಗಿದ ಕಾರ್ಯಕ್ರಮದಲ್ಲಿ ಸಾನಿಧ್ಯವಹಿಸಿ ಆಶೀರ್ವಚನ ನೀಡಿದರು. ಗುರುವಿನ ಪುಣ್ಯಾರಾಧನೆ ಅಂಗವಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಅನ್ನ ಸಂತರ್ಪಣೆ ಮಾಡುತ್ತಿರುವುದು ಸ್ತುತ್ಯಾರ್ಹವಾದುದು ಎಂದರು.

ಇದು ಇಷ್ಟಕ್ಕೆ ಸೀಮಿತಗೊಳಿಸದೆ ಈ ಪುಣ್ಯಾರಾಧನೆ ಒಂದು ದೊಡ್ಡ ಕಾರ್ಯಕ್ರಮವಾಗಿ ಪರಿವರ್ತಿಸಿ ಅನೇಕ ಶರಣರನ್ನು ಕರೆಸಿ ಗುರುವಿನ ಮಹಿಮೆಯ ಆಶೀರ್ವಚನ ಪಡೆಯಬೇಕು ಎಂದರು.

ಸಿದ್ಧನಗೌಡ ಪಾಟೀಲ ಮಾತನಾಡಿ, ಭಕ್ತಿ–ಭಾವಗಳೊಂದಿಗೆ ನಿತ್ಯ ಗುರು–ಶಿಷ್ಯರನ್ನು ಒಂದು ಮಾಡುವ ನಿತ್ಯ ಕಾಯಕ ಮಠಗಳದ್ದಾಗಿದೆ. ಸನ್ಮಾರ್ಗದೊಂದಿಗೆ ನೆಮ್ಮದಿಯ ಬದುಕು ಕಾಣಲು ಮಠ–ಮಾನ್ಯಗಳಿಗೆ ತೆರಳಿ ಮಾನಸಿಕ ಒತ್ತಡಗಳಿಂದ ದೂರ ಉಳಿಯಲು ಸಾಧ್ಯವೆಂದು ಹೇಳಿದರು.

ಮಹಾಂತಯ್ಯ ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಸಿದ್ದಯ್ಯ ಹಿರೇಮಠ, ಮಲ್ಲಣ್ಣ ಬಾವಲತ್ತಿ, ಕಿರಣ ಆಳಗಿ, ಶಿವು ಬಾಗೇವಾಡಿ, ಮಹಾಶಾಂತ ಶೆಟ್ಟರ, ಶ್ರೀಶೈಲ ಉಳ್ಳಾಗಡ್ಡಿ, ಬಸವರಾಜ ಗುಂಡಿ, ಚನ್ನಪ್ಪ ಗುಣಕಿ, ಅಶೋಕ ಹಟ್ಟಿ,

ಶಿವಾನಂದ ಗುಂಡಿ, ಶಿವು ಬಾಗೇವಾಡಿ, ಸೋಮವಾರ ಪೇಟೆ ಸಮಸ್ತ ದೈವ ಮಂಡಳಿ, ರೈತರ ಮತ್ತು ಗೌಡರ ದೈವ ಮಂಡಳಿ, ಆದಿ ಬಣಜಿಗ ಸಮಾಜ ಬಾಂಧವರ ಹಿರಿಯರು ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಶರಣ ಸಿದ್ಧಾಂತದ ಧೈರ್ಯ ತುಂಬಿದ ಬಸವಣ್ಣ: ಪ್ರೊ. ಕಡ್ಡಿ



**ಜಮಖಂಡಿ :** ಮೇಲ್ವರ್ಗದ ಜನರು ತಳ ಸಮುದಾಯದ ಜನರಿಗೆ ದೇವಾಲಯ ಪ್ರವೇಶಕ್ಕೆ ನಿಷೇಧ ಹೇರಿದ್ದರ ವಿರುದ್ಧ ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಪ್ರತಿಭಟಿಸಲಿಲ್ಲ. ಬದಲಾಗಿ ದೇಹವೇ ದೇಗುಲ, ಆತ್ಮವೇ ದೇವರು ಎಂಬ ಶರಣ ಸಿದ್ಧಾಂತದ ತಿಳಿವಳಿಕೆ ನೀಡಿ ಧೈರ್ಯ ತುಂಬಿದ್ದರು ಎಂದು ಬಸವ ಜ್ಯೋತಿ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಪ್ರೊ. ಬಸವರಾಜ ಕಡ್ಡಿ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಘಟಕದ ಆಶ್ರಯದಲ್ಲಿ ತಾಲ್ಲೂಕಿನ ಹುನ್ನೂರ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ತಾರವ್ವ ಗೌಡ್ತಿ ಬಿರಾದಾರ ಹಾಗೂ ಸಾತವೀರಯ್ಯ ಅಕ್ಕಿ ಅವರ ಸ್ಮರಣಾರ್ಥ ಶನಿವಾರ ಆಯೋಜಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಶರಣ ಸಿದ್ಧಾಂತ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಒಳ್ಳೆಯ ವಿಚಾರ ಮತ್ತು ವೈಚಾರಿಕ ಚಿಂತನೆಯಿಂದ ಮಾತ್ರ ಸಾಮಾಜಿಕ ಪರಿವರ್ತನೆ ಸಾಧ್ಯ ಎಂಬ ವಿಶ್ವಾಸದಿಂದ ಅನುಭವ ಮಂಟಪ ನಿರ್ಮಿಸಿ ಎಲ್ಲ ವರ್ಗದ ಶರಣ–ಶರಣೆಯರಿಗೆ ಅನುಭವ ಹಂಚಿಕೊಳ್ಳಲು ಬಸವಣ್ಣನವರು ಅವಕಾಶ ಮಾಡಿಕೊಟ್ಟಿದ್ದರು. ಸಮಾಜಕ್ಕಾಗಿ ತಮ್ಮ ಕುಲವನ್ನು ತ್ಯಜಿಸಿ ರಾಜಪ್ರಭುತ್ವವನ್ನು ಎದುರು ಹಾಕಿಕೊಂಡಿದ್ದರು ಎಂದರು.

ಬಸವಜ್ಯೋತಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಡಾ. ಟಿ.ಪಿ. ಗಿರಡ್ಡಿ ಮಾತನಾಡಿ, ಹುಟ್ಟಿದ ಊರಿನಲ್ಲಿ ಬದುಕು ಕಟ್ಟಿಕೊಳ್ಳಲು ಆಗದಿದ್ದರೆ ಜಗತ್ತಿನ ಯಾವ ಮೂಲೆಯಲ್ಲೂ ಬದುಕು ಕಟ್ಟಿಕೊಳ್ಳಲು ಸಾಧ್ಯವಿಲ್ಲ. ಎಷ್ಟೇ ಎತ್ತರಕ್ಕೆ ಬೆಳೆದು ಎಲ್ಲಿಯೇ ನೆಲೆಸಿದ್ದರೂ ಹುಟ್ಟಿದ ಊರಿನಲ್ಲಿಯೇ ಮೂಲ ಬೇರುಗಳು ಇರಬೇಕು ಎಂಬುದನ್ನು ತಾರವ್ವ ಗೌಡ್ತಿ ಬಿರಾದಾರ ಅವರ ಬದುಕಿನಿಂದ ಕಲಿಯಬೇಕಾದ ಪಾಠವಾಗಿದೆ ಎಂದರು.

ಹಿರಿಯವಕೀಲಡಾ.ಟಿ.ಪಿ.ಬಾಂಗಿಕಾರ್ಯಕ್ರಮವನ್ನು ಉದ್ಘಾಟಿಸಿದರು.

ಕಸಾಪ ತಾಲ್ಲೂಕು ಘಟಕದ ಅಧ್ಯಕ್ಷ ಸಂತೋಷ ತಳಕೇರಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಾಹಿತಿ ಡಾ. ವಾದಿರಾಜ ದೇಶಪಾಂಡೆ ಮಾತನಾಡಿದರು.

ದತ್ತಿದಾನಿಗಳ ಪರವಾಗಿ ಡಾ. ಭರತ ಬಿರಾದಾರ, ಭಾಗೀರಥಿಅಕ್ಕಿಉಪಸ್ಥಿತರಿದ್ದರು.ನಿವೃತ್ತಶಿಕ್ಷಣಾಧಿಕಾರಿ ಎಸ್.ಎಚ್.ಕಳಸಣ್ಣಿ ಹಾಗೂ ನಿವೃತ್ತ ಶಿಕ್ಷಕ ಗುರುನಾಥ ಸುತಾರ ಅವರನ್ನು ಸನ್ಮಾನಿಸಲಾಯಿತು. ಪೂಜಾ ಭಜಂತ್ರಿ ಪ್ರಾರ್ಥನೆ ಗೀತೆ ಹಾಡಿದರು. ಶಿಕ್ಷಕ ಬಿ. ಎಸ್. ಹಿರೇಮಠ ನಿರೂಪಿಸಿದರು. ಲಕ್ಷ್ಮಿ ಮಗದುಮ ವಂದಿಸಿದರು.

# ಅಂತರ ಜಿಲ್ಲಾ ಬೈಕ್ ಕಳ್ಳನ ಬಂಧನ: ಬೈಕ್ ವಶ




**ಜಮಖಂಡಿ :** ನಗರಠಾಣೆ ಆರಕ್ಷಕರು ಹದ್ದಿನ ಕಣ್ಣಿನಿಂದ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿದ್ದು ಬಾಗಲಕೋಟೆ, ವಿಜಯಪುರ, ಬೆಳಗಾವಿ ಜಿಲ್ಲೆಗಳಲ್ಲಿ ಬೈಕ ಕಳ್ಳತನ ಮಾಡಿದ್ದ ವ್ಯಕ್ತಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆಂದು ಬಾಗಲಕೋಟೆ ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರ ಠಾಣೆಯ ಆವರಣದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಂಧಿತನಿಂದ ವಿವಿಧ ಕಂಪನಿಗಳ ಅಂದಾಜು 11 ಲಕ್ಷ ಮೌಲ್ಯದ 24 ಬೈಕಗಳನ್ನು ವಶ ಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡಿದ್ದು, ಆರೋಪಿಯನ್ನು ನ್ಯಾಯಾಂಗ ವಶಕ್ಕೆ ನೀಡಲಾಗಿದೆ. ಕಳೆದ 15 ದಿನಗಳ ಹಿಂದೆ, ಜಮಖಂಡಿ ಗ್ರಾಮೀಣ ಠಾಣೆ ಆರಕ್ಷಕರು 22 ಬೈಕ ಕಳ್ಳತನ ಮಾಡಿದ್ದ ಆರೋಪಿಯನ್ನು ಬಂಧಿಸಿರುವರು ಎಂದರು.

ನಗರದ ಹನುಮಾನ ದೇವಸ್ಥಾನದ ಎದುರು ನಿಲ್ಲಿಸಲಾಗಿದ್ದ ತಾಲೂಕಿನ ಸಿದ್ಧಾಪುರ ಗ್ರಾಮದ ಯಲ್ಲಪ್ಪ ಕಾಗವಾಡ ಎಂಬುವರ ಬೈಕ ಆಗಸ್ಟ ಏಳರಂದು ಕಳ್ಳತನವಾಗಿತ್ತು. ಈ ಕುರಿತು ಪ್ರಕರಣ ದಾಖಲಿಸಿಕೊಂಡಿದ್ದ ನಗರ ಠಾಣೆ ಆರಕ್ಷಕರು ಡಿ.ವೈ.ಎಸ್.ಪಿ. ರೋಶನಜಮೀರ, ಸಿಪಿಐ ಮಲ್ಲಪ್ಪ ಮಡ್ಡಿ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ತಾಲೂಕಿನ ಮಧುರಖಂಡಿ ಗ್ರಾಮದ ನಿವಾಸಿ ಲಕ್ಕಪ್ಪ ಮಾದರ ಎಂಬ ಆರೋಪಿಯನ್ನು ಬಂಧಿಸಿದ್ದಾರೆ. ಬಂಧಿತನಿಂದ 24 ಬೈಕಗಳನ್ನು ವಶಪಡಿಸಿಕೊಂಡಿದ್ದಾರೆ.

ಜಮಖಂಡಿ ರಬಕವಿ–ಬನಹಟ್ಟಿ, ಮುಧೋಳ, ಬೆಳಗಾವಿ ಜಿಲ್ಲೆ ಸವದತ್ತಿ, ಮುರಗೋಡ, ವಿಜಯಪುರ ಜಿಲ್ಲೆ ಬಬಲೇಶ್ವರ, ಗಾಂಧಿಚೌಕ, ಬಸವನ ಬಾಗೇವಾಡಿ ಠಾಣಾ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿದ್ದ ಆರೋಪಿಯನ್ನು ಬಂಧಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಅಪರಾಧ ವಿಭಾಗದ ಪಿಎಸ್ಐ ಎನ್. ಕೆ. ಕಾಜಗಾರ, ನಗರಠಾಣೆ ಪಿಎಸ್ಐ ಅನೀಲ ಕುಂಬಾರ, ಆರಕ್ಷಕರಾದ ಪ್ರಕಾಶ ಹೊಸಮನಿ, ಸಂಗಪ್ಪ ಕೋರಿ, ಪರಶುರಾಮ, ಘಾಟಗೆ, ಮುತ್ತಪ್ಪ ಮಾಂಗ, ರಾಜು ಪೂಜಾರಿ, ರಾಜಶೇಖರ ಮನಗೂಳಿ ಸಹಿತ ಇನ್ನೂ ಹಲವರು ತಪಾಸಣೆಯಲ್ಲಿ ತೊಡಗಿದ್ದರು.

ಇದೇ ಸಂದರ್ಭದಲ್ಲಿ ಡಿ.ವೈ.ಎಸ್.ಪಿ. ರೋಶನ ಜಮೀರ, ಜಮಖಂಡಿ ವೃತ್ತ ಸಿಪಿಐ ಮಲ್ಲಪ್ಪ ಮಡ್ಡಿ, ಮುಧೋಳ ವೃತ್ತ ಸಿಪಿಐ ಶಿರಹಟ್ಟಿ, ನಗರಠಾಣೆ ಪಿಎಸ್ಐ ಅನೀಲ ಕುಂಬಾರ, ಅಪರಾಧ ವಿಭಾಗ ಪಿಎಸ್ಐ ಎನ್. ಕೆ. ಕಾಜಗಾರ, ಗ್ರಾಮೀಣ ಠಾಣೆ ಪಿ.ಎಸ್.ಐ. ಪೂಜಾರಿ ಹಾಜರಿದ್ದರು.

# ಸರಕಾರಿ ಶಾಲಾ ಮಕ್ಕಳಿಗೆ ಬುಕ್ಕು ಪೆನ್ನು ವಿತರಣೆ



**ತೇರದಾಳ :** ಇಲ್ಲಿನ ದೇವರಾಜ ನಗರದ ಸಚಿನ ಪಾತ್ರೋಟ ಜನ್ಮ ದಿನದ ನಿಮಿತ್ಯ ಟೈಗರ್ ಗ್ರುಪ್ ವತಿಯಿಂದ ದೇವರಾಜ ನಗರದ ಸರಕಾರಿ ಎಚ್ಪಿಎಸ್ ಶಾಲೆ ವಿದ್ಯಾರ್ಥಿಗಳಿಗೆ ನೋಟ್ಬುಕ್ ಹಾಗೂ ಪೆನ್ ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗ್ರುಪ್ಪಿನ ವಿದ್ಯಾನಂದ ಧರೆನ್ನವರ, ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡುವುದೆ ಟೈಗರ್ ಗ್ರುಪ್ ಉದ್ದೇಶವಾಗಿದೆ. ಮುಂಬರುವ ದಿನಗಳಲ್ಲಿ ಸಾರ್ವಜನಿಕರ ಸಮಸ್ಯೆಗಳಿಗೆ ಹಾಗೂ ಬಡಜನರ ಸಮಸ್ಯೆಗಳಿಗೆ ಸ್ಪಂದಿಸುವ ಹಲವು ಯೋಜನೆಗಳನ್ನು ರೂಪಿಸಲಾಗುತ್ತಿದೆ. ಸರಕಾರಿ ಶಾಲೆಗಳಿಗೆ ಬಡ ಕುಟುಂಬದ ಮಕ್ಕಳು ಬರುತ್ತಾರೆ ಎಂಬ ಉದ್ದೇಶದಿಂದ ಮಕ್ಕಳಿಗೆ ನೋಟ್ಬುಕ್ ಹಾಗೂ ಪೆನ್ ವಿತರಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಶಿಕ್ಷಕ ಶಾನೂರ ಮೋಮಿನ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಶೈಲ ಮಲಾಬಾದಿ, ಪ್ರದೀಪ, ರಾಜು ಅಲಾಸ್, ಚೇತನ, ಧರೀಶ ಹಾಗೂ ಶಾಲೆ ಶಿಕ್ಷಕರು ಹಾಜರಿದ್ದರು.

# ಭ್ರಷ್ಟಾಚಾರ ಮುಕ್ತ ಭಾರತ ನಿರ್ಮಿಸಲು ಹಾಗೂ ಸಾಮಾಜಿಕ ಶೈಕ್ಷಣಿಕ ಸಮೀಕ್ಷೆಯ ಯಶಸ್ವಿಗೆ ವಿದ್ಯಾರ್ಥಿಗಳು ಕೈ ಜೋಡಿಸಿ: ಮೂಡಲಗಿ ತಹಶೀಲ್ದಾರ ಶ್ರೀಶೈಲ್ ಗುಡಮೆ



**ಮೂಡಲಗಿ :** ಸಮಾಜದಲ್ಲಿ ಭ್ರಷ್ಟಾಚಾರವು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಹಾಳುಮಾಡುತ್ತಿರುವ ಗಂಭೀರ ಪಿಡುಗಾಗಿದೆ. ಭ್ರಷ್ಟಾಚಾರದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಅನಿವಾರ್ಯವಾಗಿದೆ ಎಂದು ಮೂಡಲಗಿ ತಹಶೀಲ್ದಾರ ಶ್ರೀಶೈಲ್ ಗುಡಮೆ ಅಭಿಪ್ರಾಯಪಟ್ಟರು.

ಅವರು ತಾಲೂಕಿನ ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಐಕ್ಯೂಎಸಿ ಘಟಕಗಳ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ "ಭ್ರಷ್ಟಾಚಾರ ವಿರೋಧಿ ಅರಿವು ಸಪ್ತಾಹ ಹಾಗೂ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ–2025ರ ಪೂರ್ವಭಾವಿ ಜಾಗೃತಿ ಅಭಿಯಾನ" ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಸರ್ಕಾರಗಳ ನೀತಿ ಧೋರಣೆಯನ್ನು ರೂಪಿಸುವಲ್ಲಿ ಸಮೀಕ್ಷೆಗಳ ಪಾತ್ರ ಮಹತ್ವದ್ದಾಗಿದೆ. ಎಲ್ಲ ನಾಗರಿಕರು ಸಂಪೂರ್ಣವಾದ ಮಾಹಿತಿಯನ್ನು ಒದಗಿಸುವ ಮೂಲಕ ಸಮೀಕ್ಷೆಯ ಕಾರ್ಯ ಯಶಸ್ವಿಯಾಗಿಸಲು ಸಹಕರಿಸಬೇಕು ಎಂದರು.

ಕಲ್ಲೋಳಿ ಪಟ್ಟಣ ಪಂಚಾಯತ ಮುಖ್ಯಾಧಿಕಾರಿ ಚಿದಾನಂದ ಮುಗಳಖೋಡ ಮಾತನಾಡಿ, ಭವಿಷ್ಯದ ಪ್ರಜೆಗಳಾದ ವಿದ್ಯಾರ್ಥಿಗಳು ಪ್ರಾಮಾಣಿಕತೆ ಮತ್ತು ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಸಮಾಜಕ್ಕೆ ಮಾದರಿಯಾಗಬೇಕು. ಎಲ್ಲಿಯವರೆಗೆ ಲಂಚವನ್ನು ನೀಡುತ್ತೀವೋ ಅಲ್ಲಿಯವರೆಗೂ ಭ್ರಷ್ಟಾಚಾರ ನಿಲ್ಲುವುದಿಲ್ಲ.ಈಗ ನಡೆಯುತ್ತಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ಕುರಿತು ಎನ್.ಎಸ್.ಎಸ್. ಸ್ವಯಂಸೇವಕರು ಸೇವಾ ಮನೋಭಾವದಿಂದ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕೆಂದು ವಿನಂತಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ. ಸುರೇಶ ಹನಗಂಡಿ ಮಾತನಾಡಿ, "ಸಮಾಜದಲ್ಲಿ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ವಿದ್ಯಾರ್ಥಿಗಳು ಮತ್ತು ಯುವಜನರು ಪ್ರಮುಖ ಪಾತ್ರ ವಹಿಸಬೇಕು. ಭ್ರಷ್ಟಾಚಾರದ ವಿರುದ್ಧ ಜಾಗೃತಿ ಮೂಡಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಎಂ.ಬಿ. ಕುಲಮೂರ, ಡಾ.ಕೆ. ಎಸ್. ಪರವ್ವಗೋಳ, ಬಿ.ಕೆ. ಸೊಂಟನವರ, ಆರ್. ಎಸ್. ಪಂಡಿತ, ವಿ. ವಾಯ್. ಕಾಳೆ, ವಿಲಾಸ ಕೆಳಗಡೆ, ಬಿ.ಬಿ. ವಾಲಿ, ಡಾ. ಆರ್.ಎಂ. ತೋಟಗಿ, ಬಿ.ಸಿ. ಮಾಳಿ, ಸಂತೋಷ ಬಂಡಿ, ಎಂ.ಆರ್. ಕರಗಣ್ಣಿ, ಸಾಗರ ಐದಮನಿ, ಮಲ್ಲಪ್ಪ ಮುರಗೋಡ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕು. ರಾಧಿಕಾ ಕರೆವ್ವಗೋಳ ಪ್ರಾರ್ಥಿಸಿದರು. ಪ್ರೊ. ಡಿ.ಎಸ್. ಹುಗ್ಗಿ ಸ್ವಾಗತಿಸಿದರು. ಡಾ.ಕೆ.ಎಸ್. ಪರವ್ವಗೋಳ ನಿರೂಪಿಸಿದರು. ಎನ್ನೆಸ್ಸೆಸ್ ಕಾರ್ಯಕ್ರಮ ಅಧಿಕಾರಿ ಪ್ರೊ. ಶಂಕರ ನಿಂಗನೂರ ವಂದಿಸಿದರು.

# ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ: ಜಿಲ್ಲಾಧಿಕಾರಿ ಸಭೆ



**ಕೊಪ್ಪಳ:** ಜಿಲ್ಲೆಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ ಮತ್ತು ಯೋಜನೆಗಳ ಫಲಾನುಭವಿಗಳಿಗೆ ಹಕ್ಕುಪತ್ರಗಳ ಸೌಲಭ್ಯ ವಿತರಣೆ ಕಾರ್ಯಕ್ರಮ ಅ. 6ರಂದು ಕೊಪ್ಪಳದಲ್ಲಿ ನಡೆಯಲಿದ್ದು, ಆಗ ಮುಖ್ಯಮಂತ್ರಿ ಸಿದ್ದರಾಮಯ್ಯ ಬರಲಿದ್ದಾರೆ.

ಈ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಬೇಕು ಎಂದು ಜಿಲ್ಲಾಧಿಕಾರಿ ಸುರೇಶ ಇಟ್ನಾಳ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ನಡೆಸಿದ ಅವರು 'ಮುಖ್ಯಮಂತ್ರಿ ಕಾರ್ಯಕ್ರಮಕ್ಕಾಗಿ ಅಧಿಕಾರಿಗಳು ಅಗತ್ಯ ಸಿದ್ಧತೆ ಕೈಗೊಳ್ಳಬೇಕು. ತಮ್ಮ ಇಲಾಖೆಗೆ ಸಂಬಂಧಿಸಿದ ಯಾವುದೇ ಕಾರ್ಯಕ್ರಮದ ಉದ್ಘಾಟನೆ, ಶಂಕುಸ್ಥಾಪನೆ ಹಾಗೂ ಫಲಾನುಭವಿಗಳಿಗೆ ಸಹಾಯಧನ, ಹಕ್ಕುಪತ್ರದ ಅಥವಾ ಇತರೆ ಸೌಲಭ್ಯಗಳ ವಿತರಣೆಯಿದ್ದಲ್ಲಿ ಅವುಗಳ ಸಂಪೂರ್ಣ ವಿವರ ಮಾಹಿತಿ ಸಂಬಂಧಿಸಿದ ಸಮಿತಿಗೆ ನೀಡಬೇಕು. ಜಿಲ್ಲೆಯ ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತಾದ ಪುಸ್ತಕ ತಯಾರಿಸಲಾಗುತ್ತಿದ್ದು, ಇದಕ್ಕಾಗಿ ಈಗಾಗಲೇ ತಂಡ ರಚಿಸಲಾಗಿದೆ' ಎಂದು ಹೇಳಿದರು.

ಕಾರ್ಯಕ್ರಮವನ್ನು ಯಶಸ್ವಿಯಾಗಿ ಸಂಘಟಿಸಲು ಸ್ವಾಗತ, ವೇದಿಕೆ, ಶಿಷ್ಟಾಚಾರ, ಮೂಲಸೌಕರ್ಯ, ಆಹಾರ, ಆರೋಗ್ಯ, ಸಾರಿಗೆ ಹೀಗೆ ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು, ಎಲ್ಲಾ ಸಮಿತಿಗಳು ತಮಗೆ ವಹಿಸಿದ ಜವಾಬ್ದಾರಿಯನ್ನು ಸಮನ್ವಯತೆಯಿಂದ ನಿರ್ವಹಿಸಬೇಕು. ಕಾರ್ಯಕ್ರಮದಲ್ಲಿ ಪಂಚ ಗ್ಯಾರಂಟಿ ಯೋಜನೆಗಳು ಸೇರಿದಂತೆ ವಿವಿಧ ಯೋಜನೆಗಳ ಫಲಾನುಭವಿಗಳನ್ನು ಕರೆತರುವ ವ್ಯವಸ್ಥೆಯನ್ನು ಆಯಾ ಇಲಾಖೆ ಅಧಿಕಾರಿಗಳು ನಿರ್ವಹಣೆ ಮಾಡಬೇಕು ಎಂದು ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಸಿಇಒ ವರ್ಣಿತ್ ನೇಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ದಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ನಿರ್ಮಲಾ, ಹೆಚ್ಚುವರಿ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಹೇಮಂತ ಕುಮಾರ್, ಸಹಾಯಕ ಆಯುಕ್ತ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಜಿ.ಪಂ ಮುಖ್ಯ ಯೋಜನಾಧಿಕಾರಿ ಡಿ.ಮಂಜುನಾಥ, ಜಂಟಿ ಕೃಷಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಂಜುನಾಥ ಗುಂಡೂರ್, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಿರಿಯ ಭೂವಿಜ್ಞಾನಿ ಪುಷ್ಪಲತಾ ಕವಲೂರು, ಭೂದಾಖಲೆ ಇಲಾಖೆಯ ಉಪನಿರ್ದೇಶಕಿ ಭಾಗ್ಯಮ್ಮ ಬಿ., ಡಿಎಚ್ಒ ಡಾ. ಟಿ.ಲಿಂಗರಾಜು ಸೇರಿ ಅನೇಕರು ಪಾಲ್ಗೊಂಡಿದ್ದರು.

Highlights - ವಾಹನಗಳ ಪಾರ್ಕಿಂಗ್ ಸೌಲಭ್ಯ ಕಲ್ಪಿಸಲು ಸೂಚನೆ ಕಾರ್ಯಕ್ರಮಕ್ಕೆ ಬಂದವರು ನೀರು, ಊಟದ ವ್ಯವಸ್ಥೆ ಅವ್ಯವಸ್ಥೆ ಕಂಡುಬಂದರೆ ಅಧಿಕಾರಿಗಳೇ ಹೊಣೆ ಮಾಡುವ ಎಚ್ಚರಿಕೆ

# ಹಿಂದಿಯು ಭಾರತ ದೇಶದಲ್ಲಿ ಅಧಿಕೃತ ಭಾಷೆಗಳಲ್ಲಿ ಒಂದಾಗಿದೆ: ಡಾ. ಮಹಾದೇವಿ ಸುಂಗಾರೆ

**ಇಂಡಿ :** ಹಿಂದಿ ದಿವಸ ಎಂದು ಜನಪ್ರೀಯವಾಗಿ ಕರೆಯಲ್ಪಡುವ ರಾಷ್ಟ್ರೀಯ ಹಿಂದಿ ದಿನವು ಭಾರತದಾದ್ಯಂತ ಸೆಪ್ಟೆಂಬರ್ 14 ರಂದು ನಡೆಯುವ ವಾರ್ಷಿಕ ಆಚರಣೆಯಾಗಿದೆ.

ಹಿಂದಿ ಭಾಷೆಯನ್ನು ಗೌರವಿಸುವ ಮತ್ತು ಉತ್ತೇಜಿಸುವ ನಿರ್ಣಾ9ಯಕ ದಿನವೆಂದು ಗುರುತಿಸಲ್ಪಟ್ಟ ಈ ರಾಷ್ಟ್ರೀಯ ಕಾರ್ಯಕ್ರಮವು 1 949 ರಲ್ಲಿ ಭಾರತದ ಅಧಿಕೃತ ಭಾಷೆಗಳಲ್ಲಿ ಒಂದಾಗಿ ಹಿಂದಿಯನ್ನು ಐತಿಹಾಸಿಕವಾಗಿ ಅಳವಡಿಸಿಕೊಂಡಿದ್ದನ್ನು ಸ್ಮರಿಸುತ್ತದೆ ಎಂದು ವಿಜಯಪುರದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಹಿಂದಿ ಉಪನ್ಯಾಸಕಿ ಡಾ. ಮಹಾದೇವಿ ಸುಂಗಾರೆ ಹೇಳಿದರು.

ಪಟ್ಟಣದ ಶ್ರೀ ಶಾಂತೇಶ್ವರ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಸೋಮವಾರ ಆಯೋಜಿಸಿದ್ದ "ರಾಷ್ಟ್ರೀಯ ಹಿಂದಿ ದಿವಸ" ಹಾಗೂ ರಾಷ್ಟ್ರೀಯ ಭಾವೈಕ್ಯತೆ, ರಾಷ್ಟ್ರಧ್ವಜ ಕುರಿತಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಉಪನ್ಯಾಸಕರಾಗಿ ಆಗಮಿಸಿದ ಭಾರತ ಸೇವಾದಳದ ವಲಯ ಸಂಘಟಕ ನಾಗೇಶ ಡೋಣೂರ ಅವರು ರಾಷ್ಟ್ರೀಯ ಭಾವೈಕ್ಯತೆ,ನೈತಿಕ ಮೌಲ್ಯಗಳು ಹಾಗೂ ರಾಷ್ಟ್ರಧ್ವಜದ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಶ್ರೀ ಶಾಂತೇಶ್ವರ ವಿದ್ಯಾ ಸಂಸ್ಥೆಯ ಅಧ್ಯಕ್ಷರಾದ ನೀಲಕಂಠಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಕಾಲೇಜಿನ ಪ್ರಾಂಶುಪಾಲರಾದ ಆರ್ ಎಸ್ ಬಿರಾದಾರ, ಉಪನ್ಯಾಸಕರಾದ ಆರ್,ಜಿ,ಪೂಜಾರಿ, ಫರಾಹರಬ್ಬಾನಿ ಮನಗೂಳಿ, ನಿವೃತ್ತ ಪ್ರಾಂಶುಪಾಲ ಎ,ಬಿ,ಪಾಟೀಲ್, ಎಸ್,ಆರ್,ಪ,ಪೂ ಕಾಲೇಜಿನ ದೈಹಿಕ ಶಿಕ್ಷಣ ಉಪನ್ಯಾಸಕ ಮಹೇಶ್ ಮೇಡೆಗಾರ, ಇನ್ನೂ ಹಲವರು ಉಪಸ್ಥಿತರಿದ್ದರು.

ಹಿಂದಿ ಉಪನ್ಯಾಸಕ ಹಾಗೂ ಭಾರತ ಸೇವಾದಳ ಘಟಕದ ಮೇಲ್ವಿಚಾರಕರಾದ ವಿಜಯಕುಮಾರ್ ರಾಠೋಡ ಸ್ವಾಗತಿಸಿದರು.

# ಹಾವು ಕಡಿತಕ್ಕೆ ನಾಟಿ ಚಿಕಿತ್ಸೆ ಬೇಡ: ತಜ್ಞ ವೈದ್ಯರು ಜಾಗೃತಿ



**ಕುಷ್ಟಗಿ:** ತಾಲ್ಲೂಕಿನ ಯಲಬುಣಚಿ ಗ್ರಾಮದಲ್ಲಿ ಶುಕ್ರವಾರ ಚಳಗೇರಾ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಅಂತರರಾಷ್ಟ್ರೀಯ ಹಾವು ಕಡಿತ ಜಾಗೃತಿ ದಿನ'ದ ನಿಮಿತ್ತ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮ ನಡೆಯಿತು.

ಈ ವೇಳೆ ಮಾತನಾಡಿದ ಆಯುಷ್ ವೈದ್ಯಾಧಿಕಾರಿ ಡಾ.ರಮೇಶ, 'ಹಾವು ಕಚ್ಚಿದಾಗ ಗಾಬರಿಯಾಗದೆ ಕಡಿತಕ್ಕೆ ಒಳಗಾದ ವ್ಯಕ್ತಿ ಸಮಾಧಾನದಿಂದ ಇರುವಂತೆ ಪ್ರೇರೇಪಿಸಬೇಕು. ಕಚ್ಚಿದ ಜಾಗವನ್ನು ಕತ್ತರಿಸುವುದು, ಬಿಗಿಯಾದ ಬಟ್ಟೆಯಿಂದ ಕಟ್ಟುವುದು, ಬಾಯಿಂದ ವಿಷ ಹೀರಲು ಯತ್ನಿಸುವುದು ಸರಿಯಲ್ಲ. ಹಾವು ಕಚ್ಚಿಸಿಕೊಂಡ ವ್ಯಕ್ತಿಯನ್ನು ನಡೆದಾಡಲು ಬಿಡಬಾರದು. ಮನೆ ಮದ್ದು ನೀಡುವುದು, ನಾಟಿ ಚಿಕಿತ್ಸೆ ಸೇರಿದಂತೆ ಯಾವುದೇ ರೀತಿಯ ಅಸುರಕ್ಷಿತ ವಿಧಾನಗಳನ್ನು ಅನುಸರಿಸುವ ಮೂಲಕ ಸಮಯವನ್ನು ವ್ಯರ್ಥ ಮಾಡದೆ ತಕ್ಷಣ ಸಮೀಪದ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದರೆ ಪ್ರಾಣಾಪಾಯದಿಂದ ಪಾರು ಮಾಡಲು ಸಾಧ್ಯ' ಎಂದರು.

ಸಾಂಕ್ರಾಮಿಕ ರೋಗ ತಜ್ಞ ಡಾ.ಪ್ರಶಾಂತ ತಾಳಿಕೋಟಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶರಣಪ್ಪ ರಾಜೂರು, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಸೋಮಶೇಖರ ಮೇಟಿ, ಕುಷ್ಠರೋಗ ಮೇಲ್ವಿಚಾರಕ ಸಂಗಯ್ಯ ಕಂಠಿಮಠ, ಆರೋಗ್ಯ ನಿರೀಕ್ಷಣಾಧಿಕಾರಿ ವಿಜಯಕುಮಾರ ಹಾಗೂ ಗ್ರಾಮ ಪಂಚಾಯಿತಿ ಸದಸ್ಯರು, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಮತ್ತು ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# 'ಎಲ್ಲರ ಪ್ರಯತ್ನ ಅಗತ್ಯ'



**ಯಲಬುರ್ಗಾ:** 'ಬಾಲ್ಯವಿವಾಹ ಮಾಡುವುದರಿಂದ ಅಪ್ರಾಪ್ತರ ಆರೋಗ್ಯ ಮತ್ತು ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತದೆ' ಎಂದು ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವಿ.ಪಿ. ಹೇಳಿದರು.

ಸ್ಥಳೀಯ ಎಸ್.ಎ.ನಿಂಗೋಜಿ ಶಿಕ್ಷಣ ಸಂಸ್ಥೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಇಲಾಖೆ, ತಾಲ್ಲೂಕು ಆರೋಗ್ಯ ಇಲಾಖೆ ಹಾಗೂ ಜಿಲ್ಲಾಡಳಿತ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಬಾಲ್ಯವಿವಾಹ ನಿಷೇಧ ಕಾಯ್ದೆ ಮತ್ತು ಆರೋಗ್ಯ ಅರಿವು ಆಂದೋಲನ ಕುರಿತು ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಬಾಲ್ಯವಿವಾಹ ತಡೆಗಟ್ಟಲು ವಿವಿಧ ರೀತಿಯಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಅಲ್ಲೊಂದು ಇಲ್ಲೊಂದು ಕದ್ದು ಮುಚ್ಚಿ ವಿವಾಹಗಳು ನಡೆಯುತ್ತಿವೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಜಾಗೃತರಾಗಿ ತಡೆಗಟ್ಟಲು ಮುಂದೆ ಬರಬೇಕು' ಎಂದು ಸಲಹೆ ನೀಡಿದರು.

ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಾಮಾಜಿಕ ಕಾರ್ಯಕರ್ತೆ ಸರಸ್ವತಿ ಅವರು ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮ, ಕೋಟ್ಪಾ ಕಾಯ್ದೆ–2003 ಕುರಿತು ವಿವರಿಸಿದರು.

ಆರ್.ಕೆ.ಎಸ್.ಕೆ ಕಾರ್ಯಕ್ರಮದ ಆಪ್ತಸಮಾಲೋಚಕ ಶರಣಪ್ಪ ಉಪ್ಪಾರ ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ಪ್ರಕಾಶ ಡಿ.ಎಚ್., ಉಪನ್ಯಾಸಕರಾದ ವಿ.ವಿ ಪತ್ತಾರ, ನಾಗರಾಜ ತಳವಾರ, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

# ವಿಜಯನಗರ ಕಾಲೇಜು ಬಾಲಕಿಯರ ತಂಡ ಫುಟ್ಬಾಲ್ ನಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ



**ಮುನಿರಾಬಾದ್:** ಇಲ್ಲಿನ ವಿಜಯನಗರ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಬಾಲಕಿಯರ ತಂಡ ಈಚೆಗೆ ನಡೆದ ರಾಜ್ಯಮಟ್ಟದ ಫುಟ್ಬಾಲ್ ನಲ್ಲಿ ಜಯಗಳಿಸಿ, ರಾಜ್ಯಮಟ್ಟಕ್ಕೆ ಆಯ್ಕೆಯಾಗಿದೆ.

ಗಂಗಾವತಿಯ ಎಚ್.ಆರ್. ಸರೋಜಮ್ಮ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಆಶ್ರಯದಲ್ಲಿ ನಡೆದ ಕೊಪ್ಪಳ ಜಿಲ್ಲಾಮಟ್ಟದ ಪಂದ್ಯದಲ್ಲಿ ತಂಡ ಆಯ್ಕೆಯಾಗಿದೆ. ಕವಿತಾ, ಭೂಮಿಕಾ, ಕಾವ್ಯ, ಆಶಾ, ಗೀತಾ, ವಿಶಾಲ, ಕಾವೇರಿ, ಅನ್ನಪೂರ್ಣ, ಗೀತಾ, ಅನಿತಾ, ಸಂಜನಾ ನಾಯಕ್, ಐಶ್ವರ್ಯ, ನಂದಿನಿ, ಶ್ರೇಯಾ, ನಾಗವೇಣಿ, ಸಂಜನಾ ಎಸ್., ಪವಿತ್ರಾ ಮತ್ತು ಈ.ನಂದಿತಾ ತಂಡದಲ್ಲಿದ್ದರು. ಬಳ್ಳಾರಿ ವೀರಶೈವ ವಿದ್ಯಾವರ್ಧಕ' ಸಂಘದ ಅಧ್ಯಕ್ಷ ಕಣೆಕಲ್ ಮಹಾಂತೇಶ

ಹಾಗೂ ಕಾಲೇಜು ಆಡಳಿತ ಮಂಡಳಿಯ ಸದಸ್ಯರು, ಕಾಲೇಜಿನ ಪ್ರಾಚಾರ್ಯ ಬಸವರಾಜ, ದೈಹಿಕ ಶಿಕ್ಷಣ ಉಪನ್ಯಾಸಕ ತಿರುಪತಿ ನಾಯಕ್ ವಿಜೇತರನ್ನು ಅಭಿನಂದಿಸಿದ್ದಾರೆ.

# ಸಕಾಲದಲ್ಲಿ ವಿಲೇ ಆಗದಿದ್ದರೆ ದಂಡದ ಎಚ್ಚರಿಕೆ: ಜಿಲ್ಲಾಧಿಕಾರಿ



**ಕೊಪ್ಪಳ:** ಸಕಾಲ ನತ್ತು ಐ.ಪಿ.ಜಿ.ಆರ್.ಎಸ್ ಅರ್ಜಿಗಳನ್ನು ಕಾಲಮಿತಿಯಲ್ಲಿ ವಿಲೇವಾರಿ ಮಾಡಲು ಸಂಬಂಧಿಸಿದ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ಕ್ರಮ ವಹಿಸಬೇಕು. ಇಲ್ಲವಾದರೆ ದಂಡ ವಿಧಿಸಬೇಕಾಗುತ್ತದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಹೇಳಿದರು.

ಇತ್ತೀಚೆಗೆ ಅವರು ಸಕಾಲ ಸಮನ್ವಯ ಸಮಿತಿ ಹಾಗೂ ಐ.ಪಿ.ಜಿ.ಆರ್.ಎಸ್ ಸಮಿತಿಯ ಪ್ರಗತಿ ಪರಿಶೀಲನಾ ಸಭೆ ನಡೆಸಿ 'ಯಾವುದೇ ಸಮಸ್ಯೆಗಳಿದ್ದರೆ ಪ್ರತಿ ಇಲಾಖೆಯ ತಮ್ಮ ಕೇಂದ್ರ ಕಚೇರಿಯಲ್ಲಿರುವ ಸಲಹೆಗಾರರಿಂದ ಮಾರ್ಗದರ್ಶನ ಪಡೆಯಬೇಕು. ಯಾವುದೇ ಕಾರಣಕ್ಕೂ ಅರ್ಜಿಗಳು ಪೆಂಡಿಂಗ್ ಇರಬಾರದು, ಆಗ ಸಕಾರಣವಿಲ್ಲದೆ ತಿರಸ್ಕೃತ ಆಗದಂತೆ ನೋಡಿಕೊಳ್ಳಬೇಕು' ಎಂದು ನಿರ್ದೇಶನ ನೀಡಿದರು.

ವಿವಿಧ ಇಲಾಖೆಗಳಲ್ಲಿ ಅರ್ಜಿಗಳನ್ನು ತಿರಸ್ಕೃತ ಮಾಡಿದರೆ ಅದು ಸಕಾಲದಲ್ಲಿಯೇ ಮಾಡಬೇಕು.

ಮುಂದಿನ ಸಭೆಗೆ ಬರುವಾಗ ಸರಿಯಾದ ಮಾಹಿತಿಯೊಂದಿಗೆ ಬರಬೇಕು' ಎಂದು ನಿರ್ದೇಶನ ನೀಡಿದರು.

ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಗದೀಶ್, ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕ ಶ್ರೀನಿವಾಸ ಕುಲಕರ್ಣಿ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ನಾಗಮಣಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕ ಡಾ. ಪಿ.ಎಂ. ಮಲ್ಲಯ್ಯ,

ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಿರಿಯ ಭೂವಿಜ್ಞಾನಿ ಪುಷ್ಪಲತಾ ಕವಲೂರು, ಭೂದಾಖಲೆ ಇಲಾಖೆಯ ಉಪನಿರ್ದೇಶಕಿ ಭಾಗ್ಯಮ್ಮ ಬಿ., ಸಕಾಲ ಸಲಹೆಗಾರ ವಿಶ್ವನಾಥ, ಐ.ಪಿ.ಜಿ.ಆರ್. ಎಸ್ ಕನ್ಸಲ್ಟಂಟ್ ಜಾಫರ್ ಭಾಗವಾನ್ ಪಾಲ್ಗೊಂಡಿದ್ದರು.

# ಎರಡು ಗಂಟೆ ಕಾಯಿಸಿ ಸಭೆ ಮುಂದೂಡಿಕೆ: ಆಕ್ರೋಶ



**ಗಂಗಾವತಿ:** 'ಕಾರಟಗಿ ನಗರದಲ್ಲಿ ಪ್ರಥಮ ದರ್ಜೆ ಕಾಲೇಜು ಮಂಜೂರು, ವಿವಿಧ ಶಾಲೆ–ಕಾಲೇಜುಗಳಿಗೆ ಅಗತ್ಯ ಸೌಕರ್ಯ ಕಲ್ಪಿಸುವ ಬಗ್ಗೆ ತಹಶೀಲ್ದಾರ್ ಕುಮಾರಸ್ವಾಮಿ ಗುರುವಾರ ತಮ್ಮ ಕಚೇರಿಯಲ್ಲಿ ಅಧಿಕಾರಿಗಳ ಸಭೆ ಕರೆದು ಅವರನ್ನು 2 ತಾಸು ಕಾಯಿಸಿ ಸಭೆ ಮುಂದೂಡಿರುವುದು ಖಂಡನೀಯ' ಎಂದು ಎಸ್‌ಎಫ್‌ಐ ಸಂಘಟನೆ ಸದಸ್ಯರು ಪ್ರತಿಭಟನೆ ನಡೆಸಿದರು.

ಸಂಘಟನೆಯ ಗಂಗಾವತಿ ತಾಲ್ಲೂಕು ಅಧ್ಯಕ್ಷ ನಾಗರಾಜ ಮಾತನಾಡಿ, 'ಕಾರಟಗಿಯಲ್ಲಿ ಪ್ರಥಮ ದರ್ಜೆ ಕಾಲೇಜು ಇಲ್ಲದ ಕಾರಣ ಆಗುತ್ತಿರುವ ತೊಂದರೆ ಸೇರಿ ವಿದ್ಯಾರ್ಥಿಗಳು ಅನುಭವಿಸುತ್ತಿರುವ ವಿವಿಧ ಸಮಸ್ಯೆಗಳ ಬಗ್ಗೆ ಇತ್ಯರ್ಥಪಡಿಸಬೇಕು ಎಂದು ಒತ್ತಾಯಿಸಿ ಕಾರಟಗಿ ತಹಶೀಲ್ದಾರ್ ಮತ್ತು ತಾ.ಪಂ ಕಚೇರಿಗೆ ಮನವಿ ಸಲ್ಲಿಸಲಾಗಿತ್ತು. ಈ ಬಗ್ಗೆ ಚರ್ಚಿಸಲು ಸೆ.18ರಂದು ಮಧ್ಯಾಹ್ನ ಕಾರಟಗಿ ತಹಶೀಲ್ದಾರ್ ಕುಮಾರಸ್ವಾಮಿ ಸಭೆ ಕರೆದಿದ್ದರು. ಎಸ್‌ಎಫ್‌ಐ ಸಂಘಟನೆಯವರೂ ಸೇರಿ ಅನೇಕ ಇಲಾಖೆ ಅಧಿಕಾರಿಗಳನ್ನೂ ಕರೆದಿದ್ದರು. ಆದರೆ 2 ಗಂಟೆಗಳ ಕಾಲ ಎಲ್ಲರನ್ನೂ ಕಾಯಿಸಿ ಸಭೆಗೆ ಬಾರದೆ ಮುಂದೂಡಿ ಅಪಹಸ್ಯ ಮಾಡಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಿರ್ಲಕ್ಷ್ಯದಿಂದ ಕಾರ್ಯನಿರ್ವಹಿಸುವ ತಹಶೀಲ್ದಾರ್ ನಮಗೆ ಅಗತ್ಯವಿಲ್ಲ. ಕೂಡಲೇ ಜಿಲ್ಲಾಧಿಕಾರಿಗಳು ಕ್ರಮಕೈಗೊಂಡು ತಮ್ಮ ನೇತೃತ್ವದಲ್ಲಿ ಕಾರಟಗಿ ತಾಲ್ಲೂಕಿಗೆ ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡುವ ಜೊತೆ ವಿವಿಧ ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಸಭೆ ನಡೆಸಬೇಕು. ಇಲ್ಲವಾದಲ್ಲಿ ಎಸ್‌ಎಫ್‌ಐ ಸಂಘಟನೆ ಉಪವಾಸ ಸತ್ಯಾಗ್ರಹ ನಡೆಸುತ್ತದೆ' ಎಂದು ಎಚ್ಚರಿಸಿದರು.

ಜಿಲ್ಲಾ ಕಾರ್ಯದರ್ಶಿ ಶಿವಕುಮಾರ, ಗಂಗಾವತಿ ತಾಲ್ಲೂಕು ಕಾರ್ಯದರ್ಶಿ ಬಾಲಾಜಿ, ಉಪಾಧ್ಯಕ್ಷ ಶರೀಫ್, ದರ್ಶನ್, ಶರಣು ಸೇರಿ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# 'ಗೊಂದಲ ಬೇಡ, ಸಮರ್ಪಕ ಮಾಹಿತಿ ನೀಡಿ'

**ಕಾರಟಗಿ:** 'ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ಬಗೆಗಿನ ಗೊಂದಲಗಳಿಗೆ ಕಿವಿಗೊಡದೇ ಮುಸ್ಲಿಂ ಸಮಾಜದವರು ಸಮೀಕ್ಷೆ ಸಮಯದಲ್ಲಿ ಸಮರ್ಪಕ ಮಾಹಿತಿ ನೀಡಬೇಕು' ಎಂದು ಜಿಲ್ಲಾ ಅಲ್ಪಸಂಖ್ಯಾತರ 15 ಅಂಶಗಳ ಅನುಷ್ಠಾನ ಸಮಿತಿ ಸದಸ್ಯ ಎಂ.ಡಿ.ಸಿರಾಜ್ ಸಿದ್ದಾಪುರ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,

'ಸಮೀಕ್ಷೆಯನ್ನು ಜಾತಿ ಗಣತಿಯಂತೆ ಬಿಂಬಿಸಿ ಗೊಂದಲ ಸೃಷ್ಟಿಸಲಾಗುತ್ತಿದೆ. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿ ಆಧರಿಸಿಯೇ ಮುಂದಿನ ದಿನಗಳಲ್ಲಿ ವಿವಿಧ ಸಮುದಾಯದವರಿಗೆ ಸವಲತ್ತು, ಅನುದಾನ ಹಂಚಿಕೆಯಾಗಲಿದೆ' ಎಂದರು.

ರಾಜ್ಯದಲ್ಲಿ ಬ್ರಾಹ್ಮಣ ಮತ್ತು ವೈಶ್ಯರು ಮಾತ್ರ ಮುಂದುವರಿದ ವರ್ಗಗಳಾಗಿದ್ದು ಉಳಿದವರೆಲ್ಲರೂ ಬಹುತೇಕ ಹಿಂದುಳಿದ ವರ್ಗಕ್ಕೆ ಸೇರಿದ್ದಾರೆ. ರಾಜ್ಯದ ಲಿಂಗಾಯತರೂ ಸಹ ಹಿಂದುಳಿದ ಪಟ್ಟಿಯಲ್ಲಿದ್ದು, ಈಗ ಗೊಂದಲಕ್ಕೆ ಸಿಲುಕಿದ್ದಾರೆ.

ಮುಸ್ಲಿಂ ಜನಾಂಗದಲ್ಲೂ ಮಲ ಬಳಿಯುವ ಮೇಥರ್ ಎಂಬ ಜನಾಂಗವಿದೆ.

ಹೀಗಾಗಿ ಎಲ್ಲಾ ರೀತಿಯ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಸಮೀಕ್ಷೆ ನಡೆಯುತ್ತಿದ್ದು, ಎಲ್ಲರೂ ಕೈಜೋಡಿಸಿ ಮಾಹಿತಿ ಒದಗಿಸಬೇಕು' ಎಂದರು.

ದೇಶದ ಮುಸಲ್ಮಾನರಲ್ಲಿ 308 ಉಪ ಜಾತಿಗಳಿದ್ದು ಸಾಮಾನ್ಯ 10, ಒಬಿಸಿ 13 ಹಾಗೂ ದಲಿತ 17ವರ್ಗಗಳು ಎಂದು ಗುರುತಿಸಲಾಗಿದೆ. ಇನ್ನು ಹಿರಿಯ ಚಿಂತಕ, ಸಂಶೋಧಕ ಪ್ರೊ.ಡಾ.ಮುಜಾಫರ್ ಅಸಾದಿಯವರ ಸಂಶೋಧನೆಯಂತೆ ರಾಜ್ಯದಲ್ಲಿ 99 ಉಪಜಾತಿಗಳಿದ್ದು, ಪ್ರಸ್ತುತ ಸಮೀಕ್ಷೆಯಂತೆ 124 ಜಾತಿಗಳಿವೆ. ಸಾಚಾರ್ ಸಮಿತಿ ಸಹಿತ ಹಿಂದೆ ಹಿಂದುಳಿದ ಆಯೋಗಗಳು ನಡೆಸಿದ ಅಧ್ಯಯನದಲ್ಲಿ ಮುಸ್ಲಿಂ ಸಮುದಾಯ ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದ್ದು, ಭೂಮಿ ಮತ್ತು ವಸತಿ ರಹಿತ ಕುಟುಂಬಗಳಿವೆ ಎಂದು ತಿಳಿಸಲಾಗಿದೆ.

ಆದರೆ ಯಾವುದೇ ವರದಿಗಳು ಜಾರಿಯಾಗಿಲ್ಲ. ಅಭಿವೃದ್ಧಿ ಕಾರ್ಯಗಳು ಅನುಷ್ಠಾನಗೊಳ್ಳಲಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈಗ ಪ್ರವರ್ಗ 1ರಲ್ಲಿ ಮುಸ್ಲಿಂ ಸಮುದಾಯದ ನದಾಫ್, ಪಿಂಜಾರ್ ಸಹಿತ 12 ಜಾತಿಗಳು ಹಾಗೂ ಪ್ರವರ್ಗ 2ಎರಲ್ಲಿ 14 ಜಾತಿಗಳು ಮೀಸಲಾತಿ ಪಡೆಯುತ್ತಿವೆ.

ಹೀಗಾಗಿ ಧರ್ಮದ ಕಾಲಂನಲ್ಲಿ ಇಸ್ಲಾಂ, ಜಾತಿ ಕಾಲಂನಲ್ಲಿ ಮುಸ್ಲಿಂ, ಉಪ ಜಾತಿಯಲ್ಲಿ ಕುಲ ಕಸುಬು ಆಧರಿಸಿದ ಉಪ ಜಾತಿ ಮಾಹಿತಿಯನ್ನು ಬರೆಯಿಸಿರಿ' ಎಂದು ಕೋರಿದರು.

ಈ ವೇಳೆ ಅಂಜುಮನ್ ಸಮಿತಿ ಅಧ್ಯಕ್ಷ ಮಹ್ಮದ್ ಸೈಫುಲ್ಲಾ, ಪ್ರಮುಖರಾದ ಖಾಜಾಹುಸೇನ್ ಮುಲ್ಲಾ, ರಬ್ಬಾನಿ ಸೇರಿದಂತೆ ಪ್ರಮುಖರು ಇದ್ದರು.

# 'ನಿಷ್ಠುರವಾದಿಯಾಗಿದ್ದ ಮಹಾಂತಯ್ಯನಮಠ'



**ಕೊಪ್ಪಳ :** 'ನಗರದ ಶಿವಮೂರ್ತಯ್ಯ ಮಹಾಂತಯ್ಯನಮಠ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಹಾಗೂ ರಾಜಕಾರಣಿಯೂ ಆಗಿದ್ದ ದಿ.ಎಂ. ಎಸ್. ಮಹಾಂತಯ್ಯಮಠ ಅವರು ನೇರ ಹಾಗೂ ನಿಷ್ಠುರವಾದಿಯಾಗಿದ್ದರು' ಎಂದು ಸಿದ್ದಣ್ಣ ನಾಲ್ವಾಡ್ ಹೇಳಿದರು.

ಬುಧವಾರ ನಗರದ ಮಹಾಂತಯ್ಯನಮಠ ಕಲ್ಯಾಣ ಮಂಟಪದಲ್ಲಿ ನಡೆದ ಶಿಕ್ಷಣ ಸಂಸ್ಥೆಯ 15ನೇ ಸಂಸ್ಥಾಪಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು 'ಎಂ.ಎಸ್.ಮಹಾಂತಯ್ಯನ ಮಠ ಕೊಪ್ಪಳ ನಗರದಲ್ಲಿ ತಮ್ಮ ತಂದೆ ಹೆಸರಿನಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆ ಆರಂಭಿಸಿ ವಂತಿಕೆ ಪಡೆಯದೆ ಬಡ ಮಕ್ಕಳಿಗಾಗಿ ಶಿಕ್ಷಣ ನೀಡುತ್ತಿದ್ದಾರೆ' ಎಂದರು.

ಸಂಸ್ಥೆಯ ಅಧ್ಯಕ್ಷೆ ಭಾರತಿ ಎಂ.ಎಸ್. ಮಹಾಂತಯ್ಯಮಠ,

ಪತ್ರಕರ್ತ ಶಿವರಾಜ ನುಗುಡೋಣಿ, ಸಂಸ್ಥೆಯ ವೀರೇಶ್ ಮಹಾಂತಯ್ಯನಮಠ, ಕೆ.ಬಿ. ಹಿರೇಮಠ, ಪ್ರಾಧ್ಯಾಪಕ ಚಂದ್ರಶೇಖರ ಜಂಗಿನ, ಮಧು ಮುರುಗೇಶ್ ಜಂಗಿನ್, ವಿಜಯಲಕ್ಷ್ಮಿ ಕುಮಾರಸ್ವಾಮಿ ಹಿರೇಮಠ, ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಬಸಯ್ಯ ಹಿರೇಮಠ, ವಿಶ್ವನಾಥ್ ಮಹಾಂತಯ್ಯನಮಠ, ಮುಖ್ಯ ಶಿಕ್ಷಕ ಮಹೇಶ್ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಕಿಡಿಗೇಡಿಗಳಿಂದ ಮೆಕ್ಕೆಜೋಳ ಬೆಳೆ ನಾಶ



**ಅಳವಂಡಿ:** ಸಮೀಪದ ಕವಲೂರು ಗ್ರಾಮದ ರೈತರೊಬ್ಬರ ಹೊಲದಲ್ಲಿನ ಮೆಕ್ಕೆಜೋಳ ಬೆಳೆಯನ್ನು ಕಿಡಿಗೇಡಿಗಳು ಕಡಿದು ನಾಶಪಡಿಸಿದ್ದಾರೆ.

ಗ್ರಾಮದ ರೈತ ಮೈಲಪ್ಪ ಪೂಜಾರ ಅವರು ಕವಲೂರು ಸೀಮಾದ (ಸ.ನಂ 1314/2) ನಾಲ್ಕು ಎಕರೆ ತಮ್ಮ ಜಮೀನಿನಲ್ಲಿ ಮೆಕ್ಕೆಜೋಳ ಬೆಳೆದಿದ್ದರು. ಸದ್ಯ ಕಾಳು ಕಟ್ಟುವ ಹಂತದಲ್ಲಿದ್ದ ಆಳೆತ್ತರ ಬೆಳೆದಿದ್ದ ಮೆಕ್ಕೆಜೋಳ ಬೆಳೆಯನ್ನು ಕಿಡಿಗೇಡಿಗಳು ನಾಶ ಮಾಡಿ ದುಷ್ಕೃತ್ಯ ನಡೆಸಿದ್ದಾರೆ.

ನಮ್ಮ ಹೊಲದಲ್ಲಿ ಮೆಕ್ಕೆಜೋಳ ಬೆಳೆಯು ಹುಲುಸಾಗಿ ಬೆಳೆದಿತ್ತು. ಸಾವಿರಾರು ರೂಪಾಯಿ ಖರ್ಚು ಮಾಡಿದ್ದೆ. ಬೆಳೆಯನ್ನು ಕಿಡಿಗೇಡಿಗಳು ಸಂಪೂರ್ಣ ನಾಶ ಮಾಡಿದ್ದಾರೆ. ಕಳೆದ ವರ್ಷವೂ ಇದೇ ರೀತಿ ನಾಶಪಡಿಸಿದ್ದರು. ಕಿಡಿಗೇಡಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಸಲ ಕೂಡ ಅದೇ ಪರಿಸ್ಥಿತಿ ನಿರ್ಮಾಣವಾಗಿ ಬೆಳೆ ನಾಶವಾಗಿದೆ. ಸಂಬಂಧಿಸಿದ ಅಧಿಕಾರಿಗಳು ಪರಿಶೀಲಿಸಿ, ನಷ್ಟ ಭರಿಸುವ ಜೊತೆಗೆ ಕಿಡಿಗೇಡಿಗಳನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಬೇಕು' ಎಂದು ರೈತ ಮೈಲಪ್ಪ ಪೂಜಾರ ಆಗ್ರಹಿಸಿದ್ದಾರೆ.

# ಬಣ್ಣಗಳನ್ನು ಬಳಸಿ ರಂಗೋಲಿ ಬಿಡಿಸಿದ ಪೌರ ಕಾರ್ಮಿಕರು



**ಜಮಖಂಡಿ:** ನಗರವನ್ನು ಸ್ವಚ್ಛತೆ ಇಡಲು ನಗರಸಭೆ ಜೊತೆಗೆ ಸಾರ್ವಜನಿಕರ ಸಹಕಾರ ಅಗತ್ಯ.

ಸ್ವಚ್ಛತಾ ಕಾರ್ಯಕ್ಕೆ ಪ್ರತಿಯೊಬ್ಬರು ಕೈಜೋಡಿಸಿದಾಗ ಮಾತ್ರ ಸುಂದರವಾದ ನಗರವನ್ನು ನಿರ್ಮಾಣ ಮಾಡಲು ಸಾಧ್ಯ ಎಂದು ಆರ್.ಓ. ಯಲ್ಲಪ್ಪ ಬಿದರಿ ತಿಳಿಸಿದರು.

ನಗರದ ಹನುಮಾನ ದೇವಸ್ಥಾನದ ಮುಂಭಾಗದಲ್ಲಿ ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು, ನಗರಸಭೆ ಜಮಖಂಡಿ ವತಿಯಿಂದ ಸ್ವಚ್ಛ ಭಾರತ್ ಮಿಷನ್ (ನಗರ) ಯೋಜನೆಯಡಿ ಸ್ವಚ್ಛತೆಯೇ ಸೇವೆ ಆಂದೋಲನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ನಗರವನ್ನು ಸ್ವಚ್ಛವಾಗಿ ಇಡಲು ತ್ಯಾಜ್ಯ ವನ್ನು ಎಲ್ಲಿಂದರಲ್ಲಿ ಎಸೆಯದೆ ನಮ್ಮ ವಾಹನಗಳಿಗೆ ಹಾಕಿ ಎಂದು ಮನವಿ ಮಾಡಿದರು.

ಪರಿಸರ ಸ್ವಚ್ಛತೆಯಿಂದ ಮನುಷ್ಯನ ಆರೋಗ್ಯ ಉತ್ತಮವಾಗುತ್ತದೆ. ಹಾಗಾಗಿ, ಎಲ್ಲರೂ ತಮ್ಮ ಸುತ್ತಲಿನ ಪರಿಸರದ ಸ್ವಚ್ಛತೆ ಕಾಪಾಡಲು ನಮ್ಮ ಜೊತೆಗೆ ಸಹಕಾರ ನೀಡಿ ಎಂದು ತಿಳಿಸಿದರು.

ಹನುಮಾನ ದೇವಸ್ಥಾನ ಆವರಣದಲ್ಲಿ ಪೌರ ಕಾರ್ಮಿಕರು ರಂಗೋಲಿ ಬಿಡಿಸುವ ಮೂಲಕ ಸಾರ್ವಜನಿಕರಿಗೆ ಸ್ವಚ್ಛತೆ ಬಗ್ಗೆ ಅರೀವು ಮೂಡಿಸಿದರು.

ನಗರಸಭೆ ಆರೋಗ್ಯ ನೀರಿಕ್ಷಕ ವಿನಾಯಕ ನಿಡೋಣಿ, ಮಂಜುನಾಥ ಬಾದಾಮಿ, ಶ್ರೀಕಾಂತ್ ಘಾಟಗೆ, ರಾಘು ಕಡಕೋಳ, ಶಶಿ ಘಾಟಗೆ, ಬಸವರಾಜ ಹಲಗಿ ಇನ್ನಿತರರು ಇದ್ದರು

# ಭಾವಾ ಮುತ್ಯ ನಿಧನಕ್ಕೆ ಸಚಿವ ಶಿವಾನಂದ ಸಂತಾಪ



**ಕೊಲ್ಹಾರ:** ಬಳೂತಿ ಗ್ರಾಮದ ಹಿರಿಯರಾಗಿದ್ದ ಪೀರನಾಥ ಶಿವಗಿರಿ ಬಾವಾ ಇವರ ನಿಧನಕ್ಕೆ ಜವಳಿ, ಸಕ್ಕರೆ, ಕಬ್ಬು ಅಭಿವೃದ್ಧಿ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ನೈತಿಕ ಪ್ರಜ್ಞೆಯ ಮಾರ್ಗದರ್ಶಕನನ್ನು ಕಳೆದುಕೊಂಡು ನಾಡು ಬಡವಾಗಿದೆ ಎಂದು ಕಂಬನಿ ಮಿಡಿದಿದ್ದಾರೆ.

ಕೃಷ್ಣಾ ಮೇಲ್ದಂಡೆ ಯೋಜನೆಗೆ ಮುಳುಗಡೆಯಾದ ಬಳೂತಿ ಗ್ರಾಮದ ಸಂತ್ರಸ್ತರ ಪರವಾಗಿ ಗಟ್ಟಿ ಧ್ವನಿಯಾಗಿದ್ದ ಭಾವಾ ಅವರು, ಅಲ್ಲಿನ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿ ಹುಟ್ಟೂರಿನ ಅಭಿವೃದ್ಧಿಗೆ ಶ್ರಮಿಸಿದ್ದರು. ಸಹಕಾರಿ ರಂಗದಲ್ಲೂ ತಮ್ಮನ್ನು ಸಮರ್ಪಿಸಿಕೊಂಡಿದ್ದ ಬಾವಾ ಅವರು, ಬಳೂತಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾಗಿ ರೈತರ ಆರ್ಥಿಕ ಅಭಿವೃದ್ಧಿಗೆ ಯೋಗದಾನ ನೀಡಿದ್ದರು ಎಂದು ಸಚಿವರು ಗುಣಗಾನ ಮಾಡಿದ್ದಾರೆ.

ಮರಾಠಾ ಸಮುದಾಯದ ಹಿರಿಯರಾಗಿದ್ದ ಪೀರನಾಥ ಅವರು ಸನ್ಯಾಸತ್ವ ಸ್ವೀಕರಿಸಿ ಸಮುದಾಯದ ಜನರಲ್ಲಿ ನೈತಿಕ ಪ್ರಜ್ಞೆ ಮೂಡಿಸುವುದಕ್ಕಾಗಿ ತಮ್ಮ ಜೀವನ ಮುಡಿಪಾಗಿಟ್ಟಿದ್ದರು. ರಾಜಕೀಯವಾಗಿ ತಮಗೆ ಮಾರ್ಗದರ್ಶಕರಿದ್ದ ಬಾವಾ ಮುತ್ಯಾ ಅವರ ನಿಧನದಿಂದ ಸ್ವಸ್ಥ ಸಮಾಜ ನಿರ್ಮಾಣದ ಹರಿಕಾರನನ್ನು ಕಳೆದುಕೊಂಡು ಬಳೂತಿ ಪರಿಸರ ಅನಾಥ ಪ್ರಜ್ಞೆ ಎದುರಿಸುತ್ತಿದೆ ಎಂದು ಸಂತಾಪ ವ್ಯಕ್ತಪಡಿಸಿದ್ದಾರೆ.

ವಯೋಸಹಜ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದ ಹಿರಿ ಜೀವವನ್ನು ಕೇವಲ ನಾಲ್ಕು ದಿನಗಳ ಹಿಂದಷ್ಟೇ ಭೇಟಿಯಾಗಿ, ಆರೋಗ್ಯ ವಿಚಾರಿಸಿ ಶೀಘ್ರ ಗುಣಮುಖರಾಗುತ್ತೀರಿ ಎಂದು ಆಶಯ ವ್ಯಕ್ತಪಡಿಸಿದ್ದಾಗಿ ಸಚಿವರು ವಿವರಿಸಿರುವ ಸಚಿವ ಶಿವಾನಂದ ಪಾಟೀಲ, ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ಅವರನ್ನು ಕಳೆದುಕೊಂಡಿರುವ ಕುಟುಂಬ ಸದಸ್ಯರು ಹಾಗೂ ಅಭಿಮಾನಿ ಬಳಗಕ್ಕೆ ದುಃಖ ಭರಿಸುವ ಶಕ್ತಿ ಲಭಿಸಲಿ ಎಂದು ಕೋರಿದ್ದಾರೆ.

# ಮಹಿಳೆಯರು ಧನಾತ್ಮಕ ಚಿಂತನೆ ಹೊಂದಿ: ಉಜ್ವಲ ಸರನಾಡಗೌಡ ಸಲಹೆ



**ವಿಜಯಪುರ:** ಮಹಿಳೆಯರು ಕೀಳರಿಮೆ ಬೆಳೆಸಿಕೊಳ್ಳಬೇಡಿ. ಧನಾತ್ಮಕ ಚಿಂತನೆಗಳನ್ನು ಅಳವಡಿಸಿಕೊಂಡು ಬದುಕಬೇಕೆಂದು ಕಾನೂನು ಮಹಾವಿದ್ಯಾಲಯದ ಪ್ರಾಧ್ಯಾಪಕಿ ಉಜ್ವಲ ಎ. ಸರನಾಡಗೌಡ ಸಲಹೆ ನೀಡಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸ್ನಾತಕ ಅಧ್ಯಯನ ವಿಭಾಗ 2025–26ನೇ ಸಾಲಿನ ಪ್ರಥಮ ವರ್ಷದ ವಿದ್ಯಾರ್ಥಿನಿಯರ ಸ್ವಾಗತ ಸಮಾರಂಭದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು ಕೌಟುಂಬಿಕ ಸಮಸ್ಯೆಗಳನ್ನು ನಿಭಾಯಿಸುವ ಜತೆಗೆ ಉತ್ತಮ ಜೀವನ ಕಟ್ಟಿಕೊಳ್ಳಿ. ಆ ಮೂಲಕವೇ ಮಹಿಳಾ ಸಬಲೀಕರಣ ಆರಂಭವಾಗುತ್ತದೆ. ವಿದ್ಯಾರ್ಥಿ ಜೀವನದಲ್ಲಿ ಕಠಿಣ ಪರಿಶ್ರಮ ಮತ್ತು ನಿರಂತರತೆ ಕಾಯ್ದುಕೊಳ್ಳುವುದು ಮುಖ್ಯ. ಕೀಳರಿಮೆ ಹೊಂದಬೇಡಿ. ಬಲಿಷ್ಠವಾಗಿ ವರ್ತಿಸುವುದನ್ನು ರೂಢಿಸಿಕೊಳ್ಳಿ. ಧನಾತ್ಮಕ ಚಿಂತನೆ ಮಾಡಿ. ಸಮಾಜದಲ್ಲಿನ ಪರಿವರ್ತನೆ ಸದಾ ಗಮನಿಸಿ. ಶಿಸ್ತು, ತಾಳ್ಮೆ, ಸಂಯಮದೊಂದಿಗೆ ಗುರಿ ಸಾಧಿಸಿ ಎಂದು ಕಿವಿಮಾತು ಹೇಳಿದರು.

ಕುಲಸಚಿವ ಶಂಕರಗೌಡ ಸೋಮನಾಳ ಮಾತನಾಡಿ, ಹೆಣ್ಣು ಮಕ್ಕಳ ಬದುಕು ಮಹಿಳಾ ಸಬಲೀಕರಣದ ಮೇಲೆ ನಿಂತಿದೆ. ವಿದ್ಯಾರ್ಥಿನಿಯರು ಸಾಧ್ಯವಾದಷ್ಟು ಮೊಬೈಲ್ ಬಳಕೆ ಕಡಿಮೆ ಮಾಡಿ. ಪುಸ್ತಕ ಓದಿ. ಆಕರ್ಷಣೆಗಳಿಂದ ದೂರವಿದ್ದು, ಸಾಧನೆಯತ್ತ ಚಿತ್ತ ಹೊಂದಿ ಎಂದು ತಿಳಿವಳಿಕೆ ಹೇಳಿದರು.

ಮೌಲ್ಯಮಾಪನ ಕುಲಸಚಿವ ಪ್ರೊ.ಬಸವರಾಜ ಲಕ್ಕಣ್ಣವರ ಮಾತನಾಡಿ, ಜೀವನದಲ್ಲಿ ಎಲ್ಲರಿಗೂ ಸಮಸ್ಯೆಗಳು ಎದುರಾಗುತ್ತವೆ. ಅವುಗಳನ್ನು ಮೆಟ್ಟಿ ಮುಂದೆ ಸಾಗುವವರು ಗುರಿ ತಲುಪುತ್ತಾರೆಂದು ಅಭಿಪ್ರಾಯಪಟ್ಟರು.

ಸ್ಥಾನಿಕ ಅಭಿಯಂತರ ಮಾರುತಿ ಕದಮ ಮಾತನಾಡಿ, ವಿದ್ಯಾರ್ಥಿಗಳು ಅತಿಯಾದ ಮೊಬೈಲ್ ಬಳಕೆಯನ್ನು ಬಿಟ್ಟು, ಸಮಯ ವ್ಯರ್ಥ ಮಾಡದೆ ಅಧ್ಯಯನಶೀಲರಾದರೆ ಮಾತ್ರ ಶೈಕ್ಷಣಿಕ ಸಾಧನೆ ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರೊ. ಸಕ್ಪಾಲ ಹೂವಣ್ಣ ಮಾತನಾಡಿ, ವಿದ್ಯಾರ್ಥಿನಿಯರು ಬದುಕಿನಲ್ಲಿ ಸಾಮಾನ್ಯ ಜ್ಞಾನವನ್ನು ಹೊಂದಿಕೊಳ್ಳುವುದು ಅತ್ಯಂತ ಅಗತ್ಯ. ಶಿಕ್ಷಣದೊಂದಿಗೆ ಜೀವನಮೌಲ್ಯಗಳು ಹಾಗೂ ಸಾಮಾನ್ಯ ಅರಿವು ಬೆಳೆಸಿಕೊಂಡರೆ ಮಾತ್ರ ವ್ಯಕ್ತಿತ್ವದ ಬೆಳವಣಿಗೆ ಸಾಧ್ಯ ಎಂದು ಹೇಳಿದರು.

ಸ್ನಾತಕ ಅಧ್ಯಯನ ವಿಭಾಗದ ಸಂಯೋಜಕಿ ಡಾ. ಜಿ. ಸೌಭಾಗ್ಯ, ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ. ಎಂ. ಪಿ. ಬಳೆಗಾರ, ಸಾಂಸ್ಕೃತಿಕ ಸಂಯೋಜಕಿ ಕು. ದೀಪಾ ಸೂರ್ಯವಂಶಿ, ವಿದ್ಯಾರ್ಥಿಗಳ ಕಾರ್ಯದರ್ಶಿ ಕು. ಲಕ್ಷ್ಮಿ ಕರ್ನಾಳ ಮತ್ತು ಬೋಧಕ–ಬೋಧಕೇತರರು ಉಪಸ್ಥಿತರಿದ್ದರು.

ವಿದ್ಯಾರ್ಥಿನಿಯರಾದ ಶೃತಿ ಕುಲಕರ್ಣಿ ತಂಡದವರು ಮಹಿಳಾ ಗೀತೆಯನ್ನು ಪ್ರಾರ್ಥಿಸಿದರು. ಗೌತಮಿ ನಾಟೇಕರ ಸ್ವಾಗತಿಸಿದರು. ಸ್ಪಂದನಾ ಪರಿಚಯಿಸಿದರು. ರುಶ್ದಾ ಖಾನಂ ರೂಗಿ ವಂದಿಸಿದರು. ಶ್ವೇತಾ, ಗೀತಾ, ವಂದನಾ, ಸಾನಿಯಾ ಮತ್ತು ರೋಹಿಣಿ ನಿರೂಪಿಸಿದರು.

# ಆರೋಗ್ಯವಂತ ಮನಸ್ಸು ಆರೋಗ್ಯಕರ ರಾಷ್ಟ್ರ ನಿರ್ಮಿಸಬಲ್ಲದು: ಪ್ರೊ;ಬಸವರಾಜ ಜಾಲವಾದಿ



**ಕೊಲ್ಹಾರ:** ಆರೋಗ್ಯವಂತ ಶರೀರದಲ್ಲಿ ಮಾತ್ರ ಆರೋಗ್ಯವಂತ ಮನಸ್ಸು ಇರಲು ಸಾಧ್ಯ ಆರೋಗ್ಯವಂತ ಮನಸ್ಸುಗಳು ಮಾತ್ರ ಆರೋಗ್ಯವಂತ ರಾಷ್ಟ್ರವನ್ನು ಕಟ್ಟಬಲ್ಲವು ಎಂದು ಸರಕಾರಿ ಪದವಿ ಪೂರ್ವ ಕಾಲೇಜು ಕೂಡಗಿಯ ರಾಜ್ಯಮಟ್ಟದ ಉತ್ತಮ ಉಪನ್ಯಾಸಕ ಪ್ರಶಸ್ತಿ ವಿಜೇತ ಪ್ರೊ ಬಸವರಾಜ ಜಾಲವಾದಿ ಹೇಳಿದರು ಅವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನೆ ಭೇಟಿ ಬಚಾವೋ ಭೇಟಿ ಪಡಾವೋ ನಿಮಿತ್ತ ರಾಷ್ಟ್ರೀಯ ಹೆಣ್ಣು ಮಗುವಿನ ದಿನಾಚರಣೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನೆ ಬಸವನಬಾಗೇವಾಡಿ ಪೋಷಣ ಅಭಿವೃದ್ಧಿ ಯೋಜನೆ ಅಡಿ ರಾಷ್ಟ್ರೀಯ ಪೋಷಣ ಮಾಸಾಚರಣೆ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು ನೀವು ಎಷ್ಟೇ ಶ್ರೀಮಂತರಿ ದ್ದರೂ ಎಷ್ಟೇ ಗಳಿಸಿದ್ದರೂ ಅದೆಷ್ಟೇ ಬಂಗಲೆಗಳನ್ನು ಕಟ್ಟಿಸಿದ್ದರೂ ಸಹ ನಿಮ್ಮ ಆರೋಗ್ಯ ಸರಿ ಇರದಿದ್ದರೆ ಅವೆಲ್ಲವೂ ಶೂನ್ಯ ಎಂದು ತಿಳಿದುಕೊಳ್ಳಬೇಕು.

ತಾಯಿ ಮತ್ತು ಮಗುವಿನ ಆರೋಗ್ಯ ಕಾಪಾಡಿಕೊಳ್ಳಲು ಕುಟುಂಬದ ಸದಸ್ಯರು ಸಹಕಾರ ನೀಡಬೇಕು ಪುರುಷನಿಗೆ ಸರಿ ಸಮಾನವಾದ ಎಲ್ಲ ಹಕ್ಕುಗಳು ಸ್ತ್ರೀಯರಿಗೆ ಕೊಟ್ಟಾಗ ಮಾತ್ರ ಅದು ಸಬಲೀಕರಣವಾಗುತ್ತದೆಂದು ರಾಜಕೀಯ ಒತ್ತಡದ ಗುಂಪಾಗಿ ಮಹಿಳೆಯರು ತಮ್ಮ ಹಕ್ಕುಗಳನ್ನು ಪಡೆಯಲು ಮುಂದಾಗಬೇಕು ಎಂದರು.

ಶಿಬಿರದಿ ಯೋಜನಾಧಿಕಾರಿ ಬಸವನ ಬಾಗೇವಾಡಿಯ ಶಿಲ್ಪಾ ಹಿರೇಮಠ ಮಾತನಾಡಿ ಹೆಣ್ಣು ಮಗುವಿನ ಆರೋಗ್ಯ ಮತ್ತು ತಾಯಿ ಮಕ್ಕಳ ಆರೋಗ್ಯದ ಕುರಿತು ಸರಕಾರ ಮತ್ತು ಇಲಾಖೆ ಹತ್ತು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದು ಅದರ ಸದುಪಯೋಗ ಪಡಿಸಿಕೊಳ್ಳಲು ಕರೆ ನೀಡಿದರು

ಪೌಷ್ಟಿಕ ಆಹಾರವನ್ನು ಕ್ರಮಬದ್ಧವಾಗಿ ಸೇವಿಸುವುದರ ಮೂಲಕ ಸುಸ್ಥಿರ ಸಮಾಜ ನಿರ್ಮಿಸಲಲು ಕಂಕಣ ಬದ್ಧರಾಗಬೇಕೆಂದು ತಾಲೂಕ ಆರೋಗ್ಯ ಶಿಕ್ಷಣಾಧಿಕಾರಿಗಳಾದ ರೋಣಿಹಾಳ ಸರ್ಕಲನ ಜಿ ಎಸ್ ಬಿಂಗಿ ಅವರು ಮಾತನಾಡಿದರು ವೇದಿಕೆ ಮೇಲೆ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಹುಶೇನಬಿ ಮಾಷಾಳ, ಸದಸ್ಯರಾದ ಕಾಶಿಬಾಯಿ ಉಳ್ಳಾಗಡ್ಡಿ, ಆರ್ಯ ತಾಳಿಕೋಟಿ ದ್ಯಾಮವ್ವ ತೋಳಮಟ್ಟಿ ಬಸವರಾಜ್ ಮಠ ನಿಂಗಪ್ಪ ತಮ್ಮ ಕೂಡಗಿ ಪ್ರಥಮ ಆರೋಗ್ಯ ಕೇಂದ್ರದ ಆರೋಗ್ಯಧಿಕಾರಿ ಡಾ //ಬಾಗವಾನ್ ಮುಂತಾದವರು ಹಾಜರಿದ್ದರು.

ರೇಣುಕಾ ಕುಂಬಾರ್ ಪ್ರಾರ್ಥಿಸಿದರು ಮಹಾಂತೇಶ್ ಪಾಟೀಲ್ ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಅನ್ನಪ್ರಶನ ಸೀಮಂತ ಕಾರ್ಯಕ್ರಮ, ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆ ಅಡಿಯಲ್ಲಿ ಮಕ್ಕಳ ಹುಟ್ಟುಹಬ್ಬವನ್ನು ಕೇಕ್ ಕಟ್ ಮಾಡುವುದರ ಮೂಲಕ ಆಚರಿಸಲಾಯಿತು.

# ಬೆಳೆ ಇರುವ ಹೊಲದಲ್ಲಿ ನಿಂತ ನೀರನ್ನು ಬಸಿಗಾಲುವೆಯಿಂದ ನೀರು ಹೊರಗೆ ಹಾಕಲು ಸಲಹೆ




**ಇಂಡಿ:** ತಾಲೂಕಿನ ಎಲ್ಲ ಕಡೆ ಪ್ರತಿದಿನ ಸತತ ಮಳೆಯಾಗುತ್ತಿದ್ದು ಬೆಳೆ ಇರುವ ಕಡೆ ನೀರು ನಿಂತಿದ್ದರೆ ಅಂತಹ ಹೊಲಗಳಲ್ಲಿ ಹರಿ ಅಥವಾ ಬಸಿ ಗಾಲುವೆ ಮಾಡಿ ನೀರು ಹಾಕಲು ಪ್ರಯತ್ನಿಸಬೇಕೆಂದು ಕೃಷಿ ಉಪ ನಿರ್ದೇಶಕ ಚಂದ್ರಕಾಂತ ಪವಾರ ರೈತರಿಗೆ ಸಲಹೆ ನೀಡಿದ್ದಾರೆ.

ತಾಲೂಕಿನ ವಿವಿಧ ಕಡೆ ರೈತರ ಹೊಲಗಳಿಗೆ ಭೇಟಿ ನೀಡಿ ಅವರಿಗೆ ಸಲಹೆ ನೀಡಿ ಉಪ ನಿರ್ದೇಶಕರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಅದಲ್ಲದೆ ಬೆಳೆ ಇರುವ ನೀರು ನಿಂತ ಹೊಲಗಳಲ್ಲಿ ಬಸಿ ಗಾಲುವೆ ನಿರ್ಮಾಣ ಮಾಡಿ ಆ ಬಸಿಗಾಲುವೆಯಿಂದ ನೀರು ಹೊಲದಿಂದ ಹೊರಹಾಕಬೇಕು. ಹೊಲದಲ್ಲಿಯೇ ನೀರು ಉಳಿದರೆ ಬೆಳೆ ಹಾಳಾಗುವ ಸಾದ್ಯತೆ ಹೆಚ್ಚು. ಬೆಳೆಗಳಿಗೆ ಶೇ 2 ರಷ್ಟು ಯುರಿಯಾ ಸಿಂಪರಣೆ ಮಾಡುವದು ಒಳಿತು ಎಂದು ಪವಾರ ಸಲಹೆ ಮಾಡಿದ್ದಾರೆ.

ಕಳೆದ ಕೆಲವು ದಿನಗಳಿಂದ ಪ್ರತಿದಿನ 40 ಮಿಮಿ ಕ್ಕೂ ಹೆಚ್ಚು ಅಥವಾ ವಾಡಿಕೆಗಿಂದ ಮಳೆಯಾಗುತ್ತಿದ್ದು ಮತ್ತೆ ಮೋಡ ಕವಿದ ವಾತಾವರಣ ಇದೆ.

ಸಹಾಯಕ ಕೃಷಿ ನಿರ್ದೇಶಕ ಮಹಾದೇವಪ್ಪ ಏವೂರ, ಕೃಷಿ ಅಧಿಕಾರಿ ಮಹಾಂತೇಶ ಸೆಟ್ಟೆಣ್ಣನವರ ಮತ್ತಿತರಿದ್ದರು.

# ಡಾ.ವಿಷ್ಣುವರ್ಧನಗೆ ಶ್ರದ್ಧಾಂಜಲಿ




**ಕೊಲ್ಹಾರ :** ಪಟ್ಟಣದ ನಟ ಡಾ॥ ವಿಷ್ಣುವರ್ಧನ್ ಅವರ ಅಭಿಮಾನಿ ಬಳಗದ ವತಿಯಿಂದ ನಡೆದ,ಕನ್ನಡ ಚಿತ್ರರಂಗದ ಮಹಾನ್ ಕಲಾವಿದರಲ್ಲಿ ಒಬ್ಬರಾದ, ಅಭಿಮಾನಿಗಳ ಪ್ರೀತಿಯ ಸಾಹಸಸಿಂಹ, ಅಭಿನಯ ಭಾರ್ಗವ, ಕರ್ನಾಟಕ ರತ್ನ ಡಾ.ವಿಷ್ಣುವರ್ಧನ್ ಅವರ ಜನ್ಮಸ್ಮರಣೆಯಂದು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಸಲ್ಲಿಸಿದರು,

ಈ ಸಂದರ್ಭದಲ್ಲಿ ಹಿರಿಯರಾದ ರಾಚಯ್ಯ ಗಣಕುಮಾರ, ಸಾಹಿತ್ಯ ಪರಿಷತ್ತಿನ ಕೊಲ್ಹಾರ ಘಟಕದ ಅಧ್ಯಕ್ಷೆ ಶ್ರೀಮತಿ ಬೌರಮ್ಮ ಶ್ರೀ ಪತಂಗಿ, ಈರಣ್ಣ ಗಡ್ಡಿಪೂಜಾರಿ, ಸಂತೋಷ ಚೌಡಪ್ಪನವರ, ಕಿಟ್ಟು ಕರಣೆ, ಮಹೇಶ ಗೋಕಾವಿ,

ಉಮೇಶ ಗಣಿ, ಹರೀಶ್ ಸೋಮಶೇಖರ, ವಿಜಯ ಗಿಡ್ಡಪ್ಪಗೋಳ, ಮಹೇಶ ಹಗೇದಾಳ ಮಲ್ಲು ಹೂಗಾರ, ಮಹೇಶ ಸೊನ್ನದ ಹಾಗೂ ಹಲವರು ಪಾಲ್ಗೊಂಡಿದ್ದರು

# ಯತ್ನಾಳರು ಅಂಬೇಡ್ಕರ್ ಅನುಯಾಯಿ: ಅಪಪ್ರಚಾರ ಖಂಡನೀಯ



**ವಿಜಯಪುರ:** ಡಾ.ಅಂಬೇಡ್ಕರ್ ಅವರ ಬಗ್ಗೆ ತಿಳಿದುಕೊಳ್ಳದ ಅನೇಕರು ಕೇವಲ ತಮ್ಮ ಸ್ವಾರ್ಥಕ್ಕಾಗಿ ಅಂಬೇಡ್ಕರ್ ಹೆಸರನ್ನು ಬಳಸುತ್ತಿದ್ದಾರೆ.

ಆದರೆ, ಯತ್ನಾಳರು ಅಂಬೇಡ್ಕರ್ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಿ, ಅವರ ಜೀವನ ಚರಿತ್ರೆ, ದೇಶಕ್ಕೆ ನೀಡಿದ ಕೊಡುಗೆ, ಅವರ ಜೀವನದಲ್ಲಾದ ಅನ್ಯಾಯ ಬಗ್ಗೆ ವಿವರಿಸಿದಲ್ಲದೆ, ತಾವು ಅಂಬೇಡ್ಕರ್ ಅವರ ಅನುಯಾಯಿ ಎಂದು ಸದನದಲ್ಲೇ ಘೋಷಿಸಿದ್ದಾರೆ.

ಅವರ ಏಳಿಗೆ ಸಹಿಸದೆ ಅಪಪ್ರಚಾರ ಮಾಡುತ್ತಿರುವುದಕ್ಕೆಪರಿಶಿಷ್ಟಸಮುದಾಯದ ಮುಖಂಡರು ಹಾಗೂ ವಿಡಿಎ ಮಾಜಿ ಸದಸ್ಯ ಮಡಿವಾಳ ಯಾಳವಾರ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈಚೆಗೆಮೈಸೂರಲ್ಲಿಮಾಧ್ಯಮದವರೊಂದಿಗೆ ಮಾತನಾಡುವಾಗ, ಬಸನಗೌಡ ಪಾಟೀಲ ಯತ್ನಾಳ ಅವರು ದಸರಾ ಉದ್ಘಾಟನೆಗೆ ಸಾಮಾನ್ಯ ದಲಿತರಿಗೂ ಅವಕಾಶವಿದೆ.

ಆದರೆ,ಭಾನುಮುಸ್ತಾಕ್ಅವರಿಗೆಇಲ್ಲವೆಂದು ಹೇಳಿರುವುದನ್ನು ತಿರುಚಿ ಸಾಮಾನ್ಯ ದಲಿತರಿಗಿಲ್ಲ ಎಂದು ಹೇಳಿದ್ದಾರೆಂದು ಸುಳ್ಳು ಸುದ್ದಿ ಹಬ್ಬಿಸಿ, ಸುಖಾಸುಮ್ಮನೆ ಗೊಂದಲ ಸೃಷ್ಟಿಸಿ ಬಸನಗೌಡರ ಹೆಸರನ್ನು ಕೆಡಿಸುವ ಹುನ್ನಾರ ಸರಿಯಲ್ಲ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸದಾ ಪರಿಶಿಷ್ಟ ಸಮುದಾಯದ ಏಳಿಗೆ ಬಯಸುವ ಯತ್ನಾಳ ಅವರು, ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಹೊಸ ಸುಂದರ ಮೂರ್ತಿಯನ್ನು ನಿರ್ಮಿಸಿದ್ದಾರೆ. ನಗರ ಹೃದಯ ಭಾಗದ ಸ್ಟೇಶನ್ ರಸ್ತೆಗೆ ಅಂಬೇಡ್ಕರ್ ಅವರ ಹೆಸರು ನಾಮಕರಣ ಮಾಡಿದ್ದಾರೆ. ಸಾಕಷ್ಟು ಅಂಬೇಡ್ಕರ್ ಭವನಗಳನ್ನು ನಿರ್ಮಾಣ ಮಾಡಿದ್ದಾರೆ.

ದೀಪಾವಳಿ ಹಬ್ಬದಲ್ಲಿ ಸುಮಾರು 3 ಸಾವಿರ ಪರಿಶಿಷ್ಟ ಜಾತಿ ಕುಟುಂಬಗಳಿಗೆ ಕಿಟ್ ವಿತರಿಸಿದ್ದಾರೆ.

ಅಂಬೇಡ್ಕರ್ ಭವನಕ್ಕೆ ಮೀಸಲಿಟ್ಟ ಜಾಗೆಯನ್ನು ವಕ್ಫ್ ಪಾಲಾಗುವುದನ್ನು ತಪ್ಪಿಸಿದ್ದಾರೆ. ಇದರಿಂದಲೇ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಅಂಬೇಡ್ಕರ್ ಅವರ ಮೇಲಿರುವ ಗೌರವ ಮತ್ತು ದಲಿತರ ಮೇಲಿನ ಕಾಳಜಿ ಅವರ ಹೃದಯದಲ್ಲಿದೆ ಎಂಬುವುದು ತಿಳಿಯುತ್ತದೆ. ವಾಸ್ತವ ಹೀಗಿರುವಾಗ ಅಪಪ್ರಚಾರಕ್ಕೆ ಯಾರೂ ಕಿವಿಗೊಡಬಾರದೆಂದು ಎಂದು ಕಿವಿಮಾತು ಹೇಳಿದ್ದಾರೆ.

# ಚಡಚಣ ಏತ ನೀರಾವರಿ ಯೋಜನೆ ದಾಖಲೆಯಲ್ಲಿ ಪೂರ್ಣ, ಹರಿಯದ ನೀರು: ಜಿಗಜಿಣಗಿ



**ವಿಜಯಪುರ:** ಚಡಚಣ ಏತ ನೀರಾವರಿ ಯೋಜನೆ ದಾಖಲೆಗಳಲ್ಲಿ ಮಾತ್ರ ಪೂರ್ಣಗೊಂಡಿದೆ. ರೈತರ ಹೊಲಗಳಿಗೆ ಒಂದುಹನಿನೀರುಹರಿದಿಲ್ಲ.ಕೂಡಲೇನೀರು ಹರಿಸಬೇಕು. ಇಲ್ಲದಿದ್ದರೆ ರೈತರೊಂದಿಗೆ ಉಪವಾಸ ಸತ್ಯಾಗ್ರಹ ಕೈಗೊಳ್ಳುವುದು ಅನಿವಾರ್ಯವಾಗುತ್ತದೆ ಎಂದು ಸಂಸದ ರಮೇಶ ಜಿಗಜಿಣಗಿ ಅವರು ಹೇಳಿದರು.

ಶುಕ್ರವಾರ ನಗರದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಒಂದು ತಿಂಗಳಲ್ಲಿ ನೀರು ಹರಿಸಲು ಗಡವು ನೀಡುತ್ತೇನೆ. ಇಲ್ಲದಿದ್ದರೆ ಚಡಚಣ ತಹಸೀಲ್ದಾರಕಚೇರಿ ಎದುರುರೈತರಜೊತೆಗೆ ಉಪವಾಸ ಸತ್ಯಾಗ್ರಹ ಕೈಗೊಳ್ಳಲಾಗುವುದು ಎಂದರು.

ಚಡಚಣ ಏತ ನೀರಾವರಿ ಯೋಜನೆ ಇಂದಿಗೂ ಪ್ರಯೋಜನವಾಗಿಲ್ಲ, ಆದರೆ ಈ ಯೋಜನೆ ಪೂರ್ಣಗೊಂಡಿದೆ ಎಂದು ಸುಳ್ಳು ವರದಿ ನೀಡಿರುವುದು ರೈತರಿಗೆ ಮಾಡಿದ ಮೋಸ ಎಂದು ಜಿಗಜಿಣಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ಯೋಜನೆಯಡಿಯಲ್ಲಿ ಪೈಪ್‌ಲೈನ್ ಕಾಮಗಾರಿ ಸರಿಯಾಗಿಲ್ಲ. ಒಂದು ವೇಳೆ, ಕಾಮಗಾರಿ ಸಮರ್ಪಕವಾಗಿ ಮಾಡಲಾಗಿದೆ ಎಂದು ಹೇಳಿದರೆ, ನಾನು ರಾಜೀನಾಮೆ ನೀಡಲು ಸಿದ್ಧನಿದ್ದೇನೆ. ಈ ಯೋಜನೆ ಬಗ್ಗೆ ಕ್ರಮ ವಹಿಸಬೇಕು ಎಂದು ಸಿಎಂ ಸೇರಿದಂತೆ ಸಂಬಂಧಪಟ್ಟ ಎಲ್ಲರಿಗೂ ಪತ್ರ ಬರೆದಿದ್ದೇನೆ. ಒಂದು ತಿಂಗಳಲ್ಲಿ ರೈತರಿಗೆ ನೀರು ಕೊಡುವ ಕೆಲಸ ಮಾಡಬೇಕು.

ಇಲ್ಲವಾದಲ್ಲಿ ಏಳು ಗ್ರಾಮಗಳ ರೈತರೊಂದಿಗೆ ನಾನು ಚಡಚಣ ತಹಸೀಲ್ದಾರ ಕಚೇರಿ ಮುಂದೆ ಧರಣಿಗೆ ಅಣಿಯಾಗಬೇಕಾಗುತ್ತದೆ ಎಂದು ಜಿಗಜಿಣಗಿ ಗುಡುಗಿದರು.

ಭೀಮಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಉಮರಾಣಿ ಬ್ಯಾರೇಜ್‌ನಿಂದ ಚಡಚಣ, ಹಾವಿನಹಾಳ, ಗೋದಿಹಾಳ, ಹಾಲಳ್ಳಿ, ಶಿರಡೋಣ, ರೇವತಗಾಂವ ಸೇರಿ 7 ಗ್ರಾಮಗಳಿಗೆ ನೀರು ಒದಗಿಸುವುದು ಏತ ನೀರಾವರಿಯೋಜನೆಉದ್ದೇಶವಾಗಿದ್ದು,22 ಸಾವಿರ ಎಕರೆಗೆ ನೀರು ಲಭ್ಯವಾಗಬೇಕಿತ್ತು. ಇಲ್ಲಿಯವರೆಗೂ ಈ ಯೋಜನೆಯಿಂದ ಹನಿ ನೀರು ಹರಿದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

2017ರಲ್ಲಿ ಈ ಯೋಜನೆಯ ಕಾಮಗಾರಿ ಆರಂಭಿಸಲಾಗಿದೆ. ಲಿಫ್ಟ್ ಹೆಡ್ ವರ್ಕ್ಸ್ ಅಂದರೆ ಇಂಟೆಕ್ ಕಾಲುವೆ, ಜಾಕ್‌ವೆಲ್, ಪಂಪ್‌ಹೌಸ್ ಸೇರಿ ಇತರ ಕಾಮಗಾರಿಗಳ ಗುತ್ತಿಗೆಯನ್ನು 105 ಕೋಟಿ ರೂಪಾಯಿಗೆ ಬೆಳಗಾವಿಯ ಆದಿತ್ಯ ನಿರ್ಮಾಣ ಕಂಪನಿಗೆ ನೀಡಲಾಗಿದೆ.

ಈ ಕಂಪನಿಯು 2019ರೊಳಗೆ ತನ್ನ ಕಾಮಗಾರಿಯನ್ನು ಪೂರ್ಣಗೊಳಿಸಬೇಕಿತ್ತು. ಆದರೆ, 2024ರಲ್ಲಿ ಪೂರ್ಣಗೊಳಿಸಿರುವುದಾಗಿ ವರದಿ ನೀಡಲಾಗಿದೆ ಎಂದರು.

ಅದೇ ರೀತಿಯಾಗಿ 186 ಕೋಟಿ ರೂ.ಗಳ ವೆಚ್ಚದ ಪೈಪ್‌ಲೈನ್ ಕಾಮಗಾರಿಗೆ ಗುತ್ತಿಗೆಯನ್ನು ಗುತ್ತಿಗೆದಾರ ಜಿ.ಶಂಕರ ಎಂಬುವರಿಗೆ ನೀಡಲಾಗಿದೆ. ಇದರ ಕಾಮಗಾರಿ 2018ರಿಂದ 2020ರೊಳಗೆ ಮುಗಿಸಬೇಕಿತ್ತು. ಆದರೆ, 2021ರಲ್ಲಿ ಕಾಮಗಾರಿ ಮುಗಿಸಲಾಗಿದೆ ಎಂದು ವರದಿ ನೀಡಲಾಗಿದೆ. ಭೂಸ್ವಾಧೀನ ಹಾಗೂ ಎಲ್ಲ ಕಾಮಗಾರಿಗಳು ಸೇರಿದಂತೆ 500 ಕೋಟಿ ರೂ.ಗಳಿಗೂ ಹಣ ವ್ಯಯಿಸಲಾಗಿದೆ. ಐದು ವರ್ಷಗಳ ನಿರ್ವಹಣೆ ಮಾಡಬೇಕು ಎಂಬ ಷರತ್ತು ವಿಧಿಸಲಾಗಿದೆ ಎಂದು ತಿಳಿಸಿದರು.

ಇದೇ ವೇಳೆ, ಕೃಷ್ಣಾ ಮೇಲ್ದಂಡೆ ಯೋಜನೆಯ ವಿಚಾರವಾಗಿ ರೈತರಿಗೆ ಸರ್ಕಾರ ನಿಗದಿ ಮಾಡಿರುವ ಪರಿಹಾರ ಮೊತ್ತ ಸೂಕ್ತವಾಗಿದೆ. ಎಕರೆಗೆ 30ರಿಂದ 40 ಲಕ್ಷ ರೂ. ಪರಿಹಾರ ಸಿಗಲಿದೆ. ಸರ್ಕಾರದ ನಿರ್ಧಾರವನ್ನು ಸ್ವಾಗತ ಮಾಡುತ್ತೇನೆ ಎಂದು ಸಂಸದರು ತಿಳಿಸಿದರು.

ಜಿಲ್ಲೆಯಲ್ಲಿ ಸರ್ಕಾರದಿಂದಲೇ ವೈದ್ಯಕೀಯ ಕಾಲೇಜು ಸ್ಥಾಪನೆಮಾಡಬೇಕು.ಯಾವುದೇ ಕಾರಣಕ್ಕೂ ಖಾಸಗಿ ಸಹಭಾಗಿತ್ವ ಬೇಡ. ಈ ಸಂಬಂಧ ಹೋರಾಟಕ್ಕೆ ನನ್ನ ಬೆಂಬಲ ಇದೆ ಎಂದು ಜಿಗಜಿಣಗಿ ಹೇಳಿದರು.

# ಕೆ.ಎಂ.ಎಫ್ ನಂದಿನಿ ಮಾರಾಟ ಮಳಿಗೆಗೆ ಸಚಿವ ತಿಮ್ಮಾಪೂರ ಚಾಲನೆ



**ಬಾಗಲಕೋಟೆ :** ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲಾ ವ್ಯಾಪ್ತಿಯಲ್ಲಿ ಹೊಸದಾಗಿ ಪ್ರಾರಂಭಿಸಲಾದ 30 ನಂದಿನಿ ಮಾರಾಟ ಮಳಿಗೆಗಳ ಪೈಕಿ ಸಾಂಕ್ಯೆತಿಕವಾಗಿ ಒಂದು ಮಾರಾಟ ಮಳಿಗೆಗೆ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ತಿಮ್ಮಾಪೂರ ಬುಧವಾರ ಚಾಲನೆ ನೀಡಿದರು.

ವಿಜಯಪುರ–ಬಾಗಲಕೋಟೆ ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ವತಿಯಿಂದ ವಿದ್ಯಾಗಿರಿಯಲ್ಲಿ ಪ್ರಾರಂಭಿಸಲಾದ ನೂತನ ನಂದಿನಿ ಮಳಿಗೆಗೆ ಸಾಂಕೇತಿಕವಾಗಿ ಚಾಲನೆ ನೀಡಿ, ಮಳಿಗೆಯಲ್ಲಿರುವ ನಂದಿನಿ ಉತ್ಪನ್ನಗಳನ್ನು ವೀಕ್ಷಣೆ ಮಾಡಿದರು. ಅಲ್ಲದೇ ಕಲಬುರ್ಗಿಯಲ್ಲಿ ರಾಜ್ಯದ ಮುಖ್ಯಮಂತ್ರಿಗಳು ರಾಜ್ಯಾದ್ಯಂತ ಏಕ ಕಾಲಕ್ಕೆ 500 ನಂದಿನಿ ಮಳಿಗೆಗಳಿಗೆ ಚಾಲನೆ ನೀಡಿರುವ ಕಾರ್ಯಕ್ರಮವನ್ನು ವರ್ಚ್ಯೂವಲ್ ಮೂಲಕ ವೀಕ್ಷಣೆ ಮಾಡಲಾಯಿತು. ರಾಜ್ಯಾದ್ಯಂತ ಚಾಲನೆ ನೀಡಲಾದ 500 ಮಳಿಗೆಗಳ ಪೈಕಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲಾ ವ್ಯಾಪ್ತಿಗೆ ತಲಾ 15 ಮಳಿಗೆಗಳ ಗುರಿ ನೀಡಲಾಗಿತ್ತು. ಅವಳಿ ಜಿಲ್ಲೆಗೆ ಗುರಿ ನೀಡಲಾದ ಒಟ್ಟು 30 ನಂದಿನಿ ಮಳಿಗೆಗಳ ಪೈಕಿ ಬಾಗಲಕೋಟೆಯಲ್ಲಿ ಒಂದು ಮಳಿಗೆಗೆ ಸಾಂಕೇತಿಕವಾಗಿ ಚಾಲನೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ವಿಜಯಪುರ–ಬಾಗಲಕೋಟೆ ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ಅಧ್ಯಕ್ಷ ಐ.ಎಸ್.ಕರಿಗೌಡ್ರ, ಒಕ್ಕೂಟದ ನಿರ್ದೇಶಕರಾದ ನಿಂಗಣ್ಣ ಹಂಡಿ, ಸಿದ್ದಪ್ಪ ಕಡಪಟ್ಟಿ, ನಿಂಗನಗೌಡ ಪಾಟೀಲ, ನಿಂಗರಾಜ ಪಾಟೀಲ, ಸಿದ್ದಣ್ಣ ಕೊಲ್ಹಾರ, ಸಿದ್ದರಾಮ ಜಂಗಮಶೆಟ್ಟಿ, ಈರಣ್ಣ ಕೊಪ್ಪದ, ಪಾತ್ರೋಟ, ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾಥ– ್ ಗೋಯಲ್, ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಡಿ.ಟಿ.ಶಿವಶಂಕರಸ್ವಾಮಿ, ಮಾರುಕಟ್ಟೆಮುಖ್ಯಸ್ಥಡಾ.ವಿ.ಆರ್. ಯಡಹಳ್ಳಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಡಿಜಿಐ ಸಂಸ್ಥೆಯಲ್ಲಿ ಕಲಬುರಗಿ ವಲಯ ಮಟ್ಟದ ವಾಲಿಬಾಲ್ ಪಂದ್ಯಾವಳಿ: ಪುರುಷರ ವಿಭಾಗದಲ್ಲಿ ರಾಯಚೂರ, ಮಹಿಳೆಯರ ವಿಭಾಗದಲ್ಲಿ ತೇರದಾಳ ಚಾಂಪಿಯನ್




**ತೇರದಾಳ :** ಬೆಂಗಳೂರಿನ ರಾಜೀವ ಗಾಂಧಿ ವಿಜ್ಞಾನ ವಿಶ್ವ ವಿದ್ಯಾಲಯ ಹಾಗೂ ತೇರದಾಳ ದಾನಿಗೊಂಡ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಆಶ್ರಯದಲ್ಲಿ ಎರಡು ದಿನಗಳ ಕಾಲ ನಡೆದ ಕಲಬುರಗಿ ವಲಯ ಮಟ್ಟದ ಮೆಡಿಕಲ್ ಕಾಲೇಜುಗಳ ವಾಲಿಬಾಲ್ ಪಂದ್ಯಾವಳಿ ಫೈನಲ್ ಪಂದ್ಯದ ಪುರುಷರ ವಿಭಾಗದಲ್ಲಿ ರಾಯಚೂರಿನ ಆರ್‌ಐಎಂಎಸ್ ತಂಡ ಹಾಗೂ ಮಹಿಳೆಯರ ವಿಭಾಗದಲ್ಲಿ ದಾನಿಗೊಂಡ ಆಯುರ್ವೇದ ಮೆಡಿಕಲ್ ಕಾಲೇಜ್ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದವು.

ಪುರುಷರ ವಿಭಾಗದ ಫೈನಲ್ ಪಂದ್ಯದಲ್ಲಿ ರಾಯಚೂರಿನ ಆರ್‌ಐಎಂಎಸ್ ಹಾಗೂ ತೇರದಾಳ ದಾನಿಗೊಂಡ ಆಯುರ್ವೇದ ಮೆಡಿಕಲ್ ಕಾಲೇಜ್ ತಂಡಗಳ ನಡುವೆ ತೀವ್ರ ಜಿದ್ದಾಜಿದ್ದಿಯಿಂದ ನಡೆಯಿತು. ಪ್ರೇಕ್ಷಕರು ಹಾಗೂ ಎಲ್ಲ ತಂಡಗಳು ಬಹಳಷ್ಟು ಕೂತುಹಲದಿಂದ ವೀಕ್ಷಣೆ ಮಾಡಿದವು. ಕೊನೆಗೆ ಎಂಟು ಅಂಕಗಳಿಂದ ರಾಯಚೂರ ತಂಡ ತೇರದಾಳ ತಂಡವನ್ನು ಸೋಲಿಸುವ ಮೂಲಕ ಗೆಲುವಿನ ನಗೆ ಬೀರಿತು. ಇನ್ನು ಮಹಿಳೆಯರ ವಿಭಾಗದ ಫೈನಲ್ ಪಂದ್ಯದಲ್ಲಿ ವಿಜಯಪುರದ ಬಿಎಲ್ಡಿಇ ಸಂಸ್ಥೆಯ ಎವಿಎಸ್ ಹಾಗೂ ತೇರದಾಳ ದಾನಿಗೊಂಡ ಮೆಡಿಕಲ್ ಕಾಲೇಜ್ ತಂಡಗಳು ಸೆಣಸಾಡಿದವು. ಆದರೆ ತೇರದಾಳ ತಂಡ ಸರ್ವಿಸ್ ಮುಖಾಂತರವೇ ಹೆಚ್ಚು ಅಂಕ ಪಡೆದು 24 ಅಂಕಗಳಿಂದ ವಿಜಯಪುರ ತಂಡವನ್ನು ಮಣಿಸಿತು. ಸಿಳ್ಳೆ ಚಪ್ಪಾಳೆ ಹೊಡೆದು ಪ್ರೇಕ್ಷಕರು ಕ್ರೀಡಾಪಟುಗಳನ್ನು ಹು–ರಿದುಂಬಿಸಿದರು. ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಡಾ. ಪುಷ್ಪದಂತ ದಾನಿಗೊಂಡ ವಿಜೇತ ತಂಡಗಳಿಗೆ ಪ್ರಶಸ್ತಿ ಪತ್ರ ಹಾಗೂ ಟ್ರೋಫಿಗಳನ್ನು ವಿತರಣೆ ಮಾಡಿದರು. ಕಲಬುರಗಿ, ಬೆಳಗಾವಿ, ವಿಜಯಪುರ, ರಾಯಚೂರ, ಬಾಗಲಕೋಟೆ ಸೇರಿದಂತೆ ಬೇರೆ ಬೇರೆ ಜಿಲ್ಲೆಗಳಿಂದ ಮೆಡಿಕಲ್ ಕಾಲೇಜ್ ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸಿದ್ದವು. ಎರಡು ದಿನ ಪಂದ್ಯಾವಳಿ ಹಾಗೂ ಊಟ ವಸತಿ ವ್ಯವಸ್ಥೆ ಕುರಿತು ಕ್ರೀಡಾಪಟುಗಳು ಮೆಚ್ಚುಗೆ ವ್ಯಕ್ತಪಡಿಸಿದರು.

# ಡಾ.ಕೊನೇಕರಿಗೆ ರಾಷ್ಟ್ರೀಯ ಗೋಲ್ಡನ್ ಅವಾರ್ಡ್ ಪ್ರದಾನ



**ಕಲಬುರಗಿ:** ಸಿದ್ದಲಿಂಗೇಶ್ವರ ಪ್ರಕಾಶನ ಮತ್ತು ಬುಕ್ ಡಿಪೊ?ದ ಪ್ರಕಾಶಕರಾದ ಡಾ. ಬಸವರಾಜ ಕೊನೆಕರ 58 ವರ್ಷದ ಸಾಧನೆಗಳನ್ನು ಮನಗೊಂಡು ನವದೆಹಲಿಯ ರಾಷ್ಟ್ರೀಯ ಪುಸ್ತಕ ವ್ಯಾಪಾರಿ ಮತ್ತು ಮುದ್ರಕರ ಸಂಘದ ವತಿಯಿಂದ ಇತ್ತೀಚಿಗೆ ನವದೆಹಲಿಯಲ್ಲಿ ರಾಷ್ಟ್ರೀಯ ಗೋಲ್ಡನ್ ಅವಾರ್ಡ್ ಪ್ರಶಸ್ತಿ ಪ್ರದಾನ ಮಾಡಲಾಯಿತು.ಸಮಾರಂಭದಲ್ಲಿ ರಾಷ್ಟ್ರೀಯ ಅಧ್ಯಕ್ಷ ಎಸ್.ಕೆ ಘಾಯ್,ಉಪಾಧ್ಯಕ್ಷ ವಿಕಾಸ ಚೌದರಿ,ಎಂ.ಎಸ್.ವೆಂಕಟೇಶ,ಕಲ್ಪನಾ ಶುಕ್ಲಾ,ಕಾರ್ಯದರ್ಶಿ ಅರುಣಜೀತ ಸಿಂಗ್ ಶುಕ್ಲಾ, ಸಿದ್ದಲಿಂಗಕೊನೇಕ್,ಪ್ರೀತಿ ಎಸ್.ಕೊನೇಕ್ ಸೇರಿದಂತೆ ಹಲವು ಗಣ್ಯರು ಇದ್ದರು.

ಕಳೆದ 50 ವರ್ಷಗಳಿಂದ ಸಕ್ರಿಯವಾಗಿ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದ ಪ್ರಕಾಶನ ಸಂಸ್ಥೆಯನ್ನು ಗುರುತಿಸಿ ನೀಡುವ ಪ್ರಶಸ್ತಿಗೆ ದಕ್ಷಿಣ ಭಾರತದಿಂದ ಕಲ್ಬುರ್ಗಿಯ ಸಿದ್ದಲಿಂಗೇಶ್ವರ ಪ್ರಕಾಶನ ಸಂಸ್ಥೆ ಆಯ್ಕೆಯಾಗಿದ್ದು ಹೆಮ್ಮೆಯ ಸಂಗತಿ. ಈ ಪ್ರಕಾಶನ ಸಂಸ್ಥೆಯಲ್ಲಿ ವರೆಗೆ 3700ಕ್ಕಿಂತ ಹೆಚ್ಚು ಕೃತಿಗಳು ಪ್ರಕಟಣೆಗೊಂಡಿದ್ದು ಸಾಹಿತ್ಯ ಮಾಲಿಕೆ,ಜನಪ್ರಿಯ ಮಾಲಿಕೆ,ಸ್ಪರ್ಧಾತ್ಮಕ ಪುಸ್ತಕಹಾಗೂ ಪಠ್ಯಪುಸ್ತಕಗಳಾದ ಶಿಕ್ಷಣ, ವಾಣಿಜ್ಯ,ಕಲಾ,ವಿಜ್ಞಾನ,ತಂತ್ರಜ್ಞಾನ ಮಕ್ಕಳ ಪುಸ್ತಕ ಸೇರಿದಂತೆ ವಿಭಿನ್ನ ಪುಸ್ತಕಗಳನ್ನು ಪ್ರಕಟಿಸುವುದರ ಮೂಲಕ ಹಿರಿಯ ಮತ್ತು ಕಿರಿಯ ಸಾಹಿತಿಗಳಿಗೆ ಹಲವಾರು ದಶಕಗಳಿಂದ ಪ್ರೊ?ರೀತ್ಸಾಹ ನೀಡುತ್ತಾ ಬಂದಿದ್ದು ಅಲ್ಲದೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಲವು ಹೊಸ ಲೇಖಕರನ್ನು ಹುಟ್ಟು ಹಾಕಿದ ಕೀರ್ತಿಗೆ ಪ್ರಕಾಶನ ಸಂಸ್ಥೆ ಭಾಜನವಾಗಿದೆ.

# ಸಂತಜೋಸೆಫ್ ಕಾಲೇಜಿನಲ್ಲಿ ಸಂಚಾರಿ ನಿಯಮ ಜಾಗೃತಿ ಕಾರ್ಯಕ್ರಮ



**ಕಲಬುರಗಿ:** ನಗರದ ಸಂತ ಜೋಸೆಫ್ ಪಿ.ಯು ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಸಂಚಾರಿ ನಿಯಮಗಳ ಜಾಗೃತಿ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು ಪ್ರಾಂಶುಪಾಲರಾದಸಿಸ್ಟರ್‌ಶರಣಲತಾಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಂಚಾರಿ ಪೊಲೀಸ್ ಠಾಣೆ–2 ಎಎಸ್‌ಐ ರಾಜಕುಮಾರ ಕೋಬಾಳೆ ವಿದ್ಯಾರ್ಥಿಗಳಿಗೆ ಸಂಚಾರಿ ನಿಯಮಗಳನ್ನು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಉಪಪ್ರಾಚಾರ್ಯ ಡಾ. ಚಿ. ಸಿ. ನಿಂಗಣ್ಣನವರು ಮಾತನಾಡಿ ಯುವಜನತೆ ಸಂಚಾರಿ ನಿಯಮಪಾಲನೆ ಮಾಡುವುದರ ಜೊತೆಗೆ ಅತಿವೇಗವಾಗಿ ವಾಹನ ಚಲಿಸಬಾರದು. ತಮ್ಮ ರಕ್ಷಣೆಯ ಜೊತೆಗೆ ಸಂಚಾರಿ ನಿಯಮ ಪಾಲಿಸುವುದು ಭವ್ಯಭವಿಷ್ಯತ್ತಿಗೆ ಸಹಾಯಕವಾಗಲಿದೆ ಎಂದು ತಿಳಿಸಿದರು . ಆರಂಭದಲ್ಲಿ ವಿದ್ಯಾರ್ಥಿನಿಯರು ಪ್ರಾರ್ಥನಾಗೀತೆ ನಡೆಸಿಕೊಟ್ಟರು , ಉಪನ್ಯಾಸಕಿ ದಿವ್ಯಾ ಕುಲಕರ್ಣಿ ನಿರೂಪಿಸಿದರು, ಸೃಜನಾ ವಂದನಾರ್ಪಣೆ ಮಾಡಿದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State